ಅಂಕಣ

ಮಾರ್ಚ್-ಏಪ್ರಿಲ್ 1984

ವಿ. ಸೀ : ಕೊನೆಯ ದಿನಗಳ ಕೆಲವು ನೆನಪು

ಸುಮನಾ

ಪಿಕಾಸೋ-ಹೇಳಿಕೆಗಳು

ಕನ್ನಡಕ್ಕೆ : ಎನ್. ಬಿ. ಚಂದ್ರಮೋಹನ್

ಉತ್ತರ ಕರ್ನಾಟಕದ ರಂಗಭೂಮಿ

ಮುದವೀಡು ಕೃಷ್ಣರಾಯರು

ಅಂಕಣ

ಮಾರ್ಚ್-ಏಪ್ರಿಲ್ ಸಂಪುಟ-5
1984 ಸಂಚಿಕೆ-4

'ಅಂಕಣ' ತಡವಾಗಿ ನಿಮ್ಮ ಕೈಸೇರುತ್ತಿದೆ. ದಯವಿಟ್ಟು ಸಹಕರಿಸಿ. 'ಅಂಕಣ'ದ ಓದುಗರು ಉತ್ತಮ ಲೇಖನಗಳನ್ನು, ಟಿಪ್ಪಣಿಗಳನ್ನು ಕಳುಹಿಸಿಕೊಟ್ಟರೆ ಒಳ್ಳೆಯದು.

ಶ್ರೀ ಸಿ.ಕೆ. ನಾಗರಾಜರಾಯರಿಗೆ ಜ್ಞಾನಪೀಠದ ಸಂಸ್ಥೆಯಿಂದ ಮೂರ್ತಿದೇವಿ ಪ್ರಶಸ್ತಿ ದೊರಕಿದೆ. ಶ್ರೀ ಜಿ.ವಿ. ಅಯ್ಯರ್ ಅವರ 'ಆದಿಶಂಕರಾಚಾರ್ಯ' ಚಲನಚಿತ್ರಕ್ಕೆ ಸ್ವರ್ಣಕಮಲ ಪ್ರಶಸ್ತಿ ದೊರಕಿದೆ. ಇಬ್ಬರಿಗೂ ಅಭಿನಂದನೆಗಳು.

ಶ್ರೀ ಮುದವೀಡು ಕೃಷ್ಣರಾಯರ 'ಉತ್ತರ ಕರ್ನಾಟಕದ ರಂಗಭೂಮಿ' ಲೇಖನವನ್ನು ಡಾ|| ಶೇಷಶಾಸ್ತ್ರಿಗಳು ಪತ್ತೆ ಹಚ್ಚಿ ಕೊಟ್ಟಿದ್ದಾರೆ. ಅವರಿಗೆ ಅಂಕಣದ ಕೃತಜ್ಞತೆಗಳು.

'ಅಂಕಣ'

8, 'ಚಿರಂಜೀವಿ', ಹಳೇ ಈಜುಕೊಳದ ರಸ್ತೆ, ಕೋದಂಡರಾಮಪುರ, ಬೆಂಗಳೂರು-560 003

ಈ ಸಂಚಿಕೆಯಲ್ಲಿ

ಲೇಖನಗಳು

ಪ್ರಕಟಣೆ : 'ಪಿ.ಪಿ.' ಬಳಗದ ಗೆಳೆಯರಿಂದ
ವಾರ್ಷಿಕ ಚಂದಾ : ಹತ್ತು ರೂಪಾಯಿ
'ಅಂಕಣ' ಸ್ಥಾಯಿನಿಧಿ : ನೂರು ರೂಪಾಯಿ

ವಿ. ಸೀ: ಕೊನೆಯ ದಿನಗಳ ಕೆಲವು ನೆನಪು

'ಸುಮನಾ'

ಹಿರಿಯ ಸಾಹಿತಿಗಳಲ್ಲಿ ಒಬ್ಬರೂ ಬಹುಶ್ರುತರೂ ಆಗಿದ್ದ ಶ್ರೀ ವಿ. ಸಿ. ಈಗ ಏಳು ತಿಂಗಳ ಹಿಂದೆ ತಮ್ಮ ಎಂಬತ್ತನಾಲ್ಕನೆಯ ವಯಸ್ಸಿನಲ್ಲಿ ತೀರಿಕೊಂಡದ್ದರಿಂದ ಆ ತಲೆಮಾರಿಗೂ ನಮ್ಮ ತಲೆಮಾರಿಗೂ ಇದ್ದ ದೊಡ್ಡ ಕೊಂಡಿ ಒಂದು ಕಳಚಿದಂತಾಗಿದೆ. ತಮ್ಮ ಶುಚಿ ರುಚಿ ಅಭಿರುಚಿಗಳಿಂದ ಜೀವಿತ ಕಾಲದಲ್ಲಿಯೇ ಒಬ್ಬ ಲೆಜೆಂಡರಿ ವ್ಯಕ್ತಿ ಆಗಿದ್ದ ವಿ. ಸೀ. ಕವಿ, ವಿಮರ್ಶಕ, ಲಲಿತ, ಪ್ರಬಂಧಕಾರ, ನಾಟಕಕಾರ, ವ್ಯಕ್ತಿ ಚಿತ್ರ ರಚನಕಾರ ಇತ್ಯಾದಿ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಿದ್ಧಹಸ್ತರಾಗಿದ್ದವರು. ನಮ್ಮ ಖ್ಯಾತ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರು. ತಮ್ಮ ವಿಶಿಷ್ಟ ಕೊಡುಗೆಗಳಿಂದ ಆ ಎಲ್ಲ ಪ್ರಕಾರಗಳಲ್ಲಿ ಮಾದರಿಯಾಗಬಲ್ಲ ಕೃತಿ ರಚನೆ ಮಾಡಿ ನಮ್ಮ ಸಾಹಿತ್ಯಕ ಸಂಪತ್ತನ್ನು ಶ್ರೀಮಂತಗೊಳಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಎಂ.ಎ. ಪಡೆದರೂ ಸುಮಾರು ಅರ್ಧ ಶತಮಾನ ಕಾಲಕ್ಕೆ ಮಿಕ್ಕು ಮಾಧ್ಯಮಿಕ ತರಗತಿಗಳಿಂದ ಹಿಡಿದು ಸ್ನಾತಕೋತ್ತರ ಪದವಿ ತರಗತಿಗಳವರೆಗೆ ಅಸಂಖ್ಯ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕನ್ನಡ ಸಾಹಿತ್ಯದ, ಅರ್ಥಶಾಸ್ತ್ರದ ಯಶಸ್ವೀ ಬೋಧಕರಾಗಿದ್ದುದು ಬಹುಶಃ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿಯೇ ಒಂದು ದಾಖಲೆಯೊ ಏನೊ. ಯಾವುದೇ ಒಂದು ವಿಷಯಕ್ಕೆ ಮಾತ್ರ ತಮ್ಮನ್ನು ತಾವು ಸೀಮಿತಗೊಳ್ಳದೆ ಹತ್ತಾರು ವಿಷಯಗಳತ್ತ ಒಲವು, ಆಸಕ್ತಿ ಹರಿಸಿದ್ದು ವ್ಯಾಸಂಗ, ಚಿಂತನ, ಬರೆಹಕ್ಕೆ ತೊಡಗಿದ್ದು ಅವರ ಬಹುಮುಖ ವಿದ್ವತ್ತಿಗೆ, ಸಾಧನೆಗೆ ಸಾಕ್ಷಿಯಾಗಿರುವಂತೆಯೇ ಅವರ ಬಾಳಿನ ದುರಂತಕ್ಕೂ ಒಂದು ಕಾರಣ ಆಯಿತೇನೊ ಎನ್ನಿಸುತ್ತದೆ. ಇಲ್ಲಿಯೂ ಸಲ್ಲದೆ ಅಲ್ಲಿಯೂ ಸಲ್ಲದೆ ತಮ್ಮ ಪ್ರತಿಭೆ ಚೆದರಿ ಹೋಯಿತೇನೋ ಎಂಬ ಅನುಮಾನ ಒಮ್ಮೊಮ್ಮೆ ಅವರಲ್ಲಿ ಕಾಣಿಸುತ್ತಿತ್ತು. ಆದರೆ ಅವರು ಬಿಟ್ಟು ಹೋಗಿರುವ ಹೆಜ್ಜೆಗುರುತು ಸಮರ್ಥವಾದ್ದರಿಂದ ಗಾಳಿ ಬೀಸಿದರೂ ಅವು ಮಾಯವಾಗದೆ, ಕಾಲದ ಎಣಿಕೆಯಲ್ಲಿ ತೇರಿ ಉಳಿಯುತ್ತವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಅವರ ಸಾಹಿತ್ಯಕ ರಚನೆಗಳಿಗಿಂತ ಅವರ ಜೀವನ, ಬದುಕು ದೊಡ್ಡದು. ಸಾಹಿತ್ಯ, ಸಂಗೀತ, ಲಲಿತಕಲೆ, ತತ್ವಶಾಸ್ತ್ರ, ಮತಧರ್ಮ, ಎಲ್ಲ ವಿದ್ಯೆ, ಕಲಿಕೆ– ಎಲ್ಲವೂ ನಮ್ಮ ಬದುಕನ್ನು ಚೆಲುಗೊಳಿಸಬೇಕು, ಬಾಳಿಗೆ ಪೂರಕವಾಗಬೇಕು ಎಂದು ನಂಬಿ, ಅದರಂತೆ ಉದ್ದಕ್ಕೂ ಬದುಕಿ, ತಮ್ಮ ಬದುಕನ್ನು ಸುಂದರಗೊಳಿಸಿಕೊಂಡವರು ವಿ. ಸೀ. ಅವರ ಬದುಕೇ ಒಂದು ಕಾವ್ಯ. ಬದುಕಿನಲ್ಲಿ ಬರಹದಲ್ಲಿ ಮಾನವೀಯ ಗುಣಗಳಿಗೆ ಮೌಲ್ಯಗಳಿಗೆ ಅವರು ಕೊಟ್ಟ ಸ್ಥಾನ ಎತ್ತರದ್ದು. ದಿನಜೀವನದ ನೋವು

ನಲಿವು, ಆಸೆ ನಿರಾಸೆ, ಸೋಲು ಗೆಲವು, ಕೆಳೆಕರುಣೆ, ಪ್ರೀತಿ ಔದಾರ್ಯಗಳಿಗೆ ಅವರ ಮನಸ್ಸು ಸದಾ ಮಿಡಿಯಿತು. "Sweet, sweet is this human life So sweet, I fain would breathe it still" ಎನ್ನುತ್ತಿದ್ದರು. ತಮ್ಮ ಬದುಕನ್ನೆಂತೊ ಇತರರ ಬಾಳನ್ನೂ ಸವಿಗೊಳಿಸಿದರು. ಒಮ್ಮೆ ಅವರನ್ನು ಹತ್ತಿರದಿಂದ ಕಂಡವರು ಅವರನ್ನು ಮರೆಯಲಾರರು.

ಅವರ ಕೊನೆಯ ಎರಡು ಮೂರು ವರ್ಷದ ಬದುಕು ಸುಖಕರವಾಗದಿದ್ದುದು ವಿಷಾದನೀಯ.

* * *

ಫೆಬ್ರುವರಿ 16, 1980 ಅಮಾವಾಸ್ಯೆ, ಸೂರ್ಯಗ್ರಹಣ. (ಆ ದಿನವೇ ವಿ. ಸೀ. ಅವರ ತಂದೆಯ ವಾರ್ಷಿಕ ತಿಥಿ). ಬೆಳಗ್ಗೆ ಇದಕ್ಕಾದ್ದಂತೆ ವಿ. ಸೀ. ಅವರಿಗೆ ಪೂರ್ತಿ ಮಾತು ನಿಂತಿತು. ನೆನಪು ಸಂಪೂರ್ಣ ನಷ್ಟವಾಯಿತು. ಇಡೀ ದಿನ ಅವರ ಮುಖ ತೀರ ಕಪ್ಪಿಟ್ಟಿತು. ಶೂನ್ಯ ಕಳೆ. ಏನೊಂದೂ ತೋಚದವರಂತಿದ್ದರು. ಆಗೀಗ ಏನನ್ನೊ ದಿಟ್ಟಿಸುತ್ತ ಒಂದು ಕಡೆ ಕುಳಿತುಬಿಟ್ಟರು. ಯಾವುದೇ ಮಾತಿಗೂ ಅವರಿಂದ ಪ್ರತಿಕ್ರಿಯೆ ಬರುತ್ತಿರಲಿಲ್ಲ. ಮನಸ್ಸಿಗೆ ಏನಾದರೂ ಒಂದು ಪದ ತಟ್ಟಿದರೆ ಅದನ್ನೇ ಹತ್ತಾರು ಸಲ ತಡೆಯಿಲ್ಲದಂತೆ ನುಡಿಯುತ್ತಿದ್ದರು. ದಿನವೆಲ್ಲ ಹಾಗಿದ್ದುದನ್ನು ಕಂಡು ಹತ್ತಿರದ ಎಲ್ಲರಿಗೂ ಗಾಬರಿ. ಬಹುಶಃ ಅದೇ ಅವರ ಕೊನೆಯ ದಿನವೂ ಆಗಿಬಿಡುವುದೇನೊ ಎಂಬ ಸಂದೇಹವನ್ನೂ ಅಂದಿನ ಅವರ ಸ್ಥಿತಿ ಮೂಡಿಸಿತ್ತು. ಹಾಗೆ ಆಗಲಿಲ್ಲ.... ಸುದೈವದಿಂದ ಇನ್ನೂ ಎರಡೂವರೆ ವರ್ಷ ನಮ್ಮೊಡವಿದ್ದರು.

ಆ ಸಂಜೆ ಪರಿಚಿತ ವೈದ್ಯರಲ್ಲಿಗೆ ಕರೆದೊಯ್ದೆವು. ಎರಡು ದಿನ ಹಿಂದೆ ಬೇರೊಬ್ಬ ವೈದ್ಯರು ಸೂಚಿಸಿದ್ದ ಸೂಚಿಸಿದ್ದ ಕ್ಯಾಪ್ಸೂಲನ್ನು ತೆಗೆದುಕೊಳ್ಳುತ್ತಿದ್ದರು. ದಿನಕ್ಕೆ ಮೂರರಂತೆ ಹನ್ನೆರಡನ್ನು ಸೇವಿಸಬೇಕಿತ್ತು. ಮೂರೊ ನಾಲ್ಕೊ ತೆಗೆದುಕೊಂಡಿದ್ದರು. ಪರಿಚಿತ ವೈದ್ಯರ ಹೇಳಿಕೆ— ಆ ಕ್ಯಾಪ್ಸೂಲು ತೀವ್ರ ಶಕ್ತಿಯುವು, ಅವನ್ನು ತಡೆಯಲು ವಿ. ಸೀ. ಶಕ್ತರಾಗಿಲ್ಲ, ಅದರ ಪ್ರಭಾವದಿಂದಾಗಿ ಅವರ ಮೆದುಳಿನಲ್ಲಿನ ನೆನಪಿನ ಜೀವ ಕೋಶಗಳಿಗೆ (ಸೆಲ್ಸ್) ಆಘಾತವಾಗಿ ನೆನಪು ಹೋಗಿದೆ (ಹ್ಯಮರೇಜ್), ಪುನಃ ಮೊದಲಿನಂತೆ ಅವನ್ನು ಗುಣಪಡಿಸಲಾಗುವುದಿಲ್ಲ, ನೆನಪು ಮರುಕೊಳಿಸಲು ಕೆಲವು ಉತ್ತೇಜಕಗಳನ್ನು ಕೊಟ್ಟು ನೋಡುವುದು, ಪ್ರಯತ್ನಿಸೋಣ ಎಂದು. ಇದನ್ನು ಕೇಳಿದ ಎಲ್ಲರಿಗೂ ಆಘಾತವೇ ಆಯಿತು. ಆದರೆ ಆಗಬಾರದುದು ಆಗಲೇ ಆಗಿ ಹೋಗಿತ್ತು.... ಪರಿಣಾಮ ಘೋರವಾಗಿತ್ತಾಗಿ ಕ್ಯಾಪ್ಸೂಲ್ ಸೇವನೆಯನ್ನು ತತ್‌ಕ್ಷಣ ನಿಲ್ಲಿಸಿ, ಪರಿಚಿತ ವೈದ್ಯರ ಸಲಹೆಯಂತೆ ನೆನಪನ್ನು ಮರುಕೊಳಿಸುವ ಉತ್ತೇಜಕ ಔಷಧಗಳನ್ನು ತೆಗೆದುಕೊಳ್ಳ ತೊಡಗಿದರು. ಒಂದೆರಡು ವಾರಗಳಲ್ಲಿ ನಾಲ್ಕಾರು ಮಾತಾಡುವ ಶಕ್ತಿ ಬಂದಿತು. ಪ್ರಯಾಸದ ಪ್ರಯತ್ನದಿಂದ ಅಷ್ಟಿಷ್ಟು ನೆನಪೂ ಮರುಕೊಳಿಸಿತು.

ಆದರೆ ಆವರೆಗೆ ಅವರಿಗಿದ್ದ, ಅವರದಾಗಿದ್ದ ಅದ್ಭುತ ಸ್ಮೃತಿಶಕ್ತಿ, ಅಪೂರ್ವ ವಾಗ್ಮಿತೆ, ಸಂಭಾಷಣಾ ಚಾತುರ್ಯ, ಕಾವ್ಯ ನಾಟಕಗಳನ್ನು ಓದಿ ತೋರಿಸುತ್ತಿದ್ದ ಒಂದು ಅನುಪಮ ಕಲೆಗಾರಿಕೆ, ಅನಾಯಾಸವಾಗಿ ಪೂರ್ವಸಿದ್ಧತೆಯಿಲ್ಲದೆ ಯಾವಾಗ ಎಂದರೆ ಆಗ ಪುಟಗಟ್ಟಲೆ ಹೇಳಿ ಬರೆಸುತ್ತಿದ್ದ ಧೀಶಕ್ತಿ–ಎಲ್ಲವೂ ಇತಿಹಾಸಕ್ಕೇ ಸೇರಿ ಹೋದವು. ಸದಾ ಚಟುವಟಿಕೆಯಿಂದಿರುತ್ತಿದ್ದು, ಗಂಟೆಗಟ್ಟಳೆ ಲೋಕಾಭಿರಾಮವಾಗಿ ಹೃದ್ಯವಾಗಿ ಮಾತನಾಡಿ, ಒಂದು ವಿಶ್ವರೂಪ ದರ್ಶನವನ್ನೇ ಕಣ್ಮುಂದೆ ಕಟ್ಟಿಸುತ್ತಿದ್ದ ವಿ. ಸೀ. ಈಗ ತಾಸುಗಟ್ಟಳೆ ಮೌನವಾಗಿ ಕುಳಿತಲ್ಲೇ ಏಕಾಕಿಯಾಗಿ ಕುಳಿತಿರು ವಂತಾಯಿತು. ತಮ್ಮ ಬದುಕಿನ ಎಂಬತ್ತು ಸಂವತ್ಸರದಲ್ಲಿ ಕಂಡು, ಕೇಳಿ, ಓದಿ, ತಿಳಿದ ಎಲ್ಲ ಅನುಭವದ ನೇಪೂ ಕಣ್ಮರೆಯಾಗಿ, ಕೇವಲ ಶೂನ್ಯನೆ ಆವರಿಸಿದ್ದ ವ್ಯಕ್ತಿ ಆದರು. ಇದರೊಡನೆ ಅವರ ಬೌದ್ಧಿಕ, ಸಾಹಿತ್ಯಕ ಜೀವನವೂ ಪರಿಸಮಾಪ್ತಗೊಂಡದ್ದು ಒಂದು ದೊಡ್ಡ, ಅನಿವಾರ್ಯ ದುರಂತವೇ.

ಮುಂದೆ ಎರಡು ತಿಂಗಳು ತಪ್ಪದೆ ನೆನಪು ಮರುಕೊಳಿಸಲು ಸಹಾಯಕವಾಗಿದ್ದ ಔಷಧ ಸೇವಿಸಿಯೂ ಹೆಚ್ಚಿನ ಉಪಯುಕ್ತತೆ ಕಾಣದ್ದರಿಂದ ಬೇಸರಗೊಂಡ ವಿ. ಸೀ. ಅವನ್ನೂ ಇಲ್ಲಿಸಿಬಿಟ್ಟರು. ಅಷ್ಟರಲ್ಲಿ ಇನ್ನು ಸ್ವಲ್ಪ ಮಾತ್ರ ಗುಣ ಕಂಡಿತ್ತೇನೊ, ಅಷ್ಟೆ. ಬಂದವರನ್ನು ಗುರುತಿಸಬಲ್ಲವರಾಗಿದ್ದರು. ಹೆಸರು ನೆನಪಿರುತ್ತಿರಲಿಲ್ಲ. ಆದರೆ ಮುಖ ಪರಿಚಯ ಇರುತ್ತಿತ್ತು. ಬಂದವರು ಹೋದ ಮೇಲೆ ಒಂದೊಂದು ಸಲ ಅವರ ಹೆಸರು ಪೂರ್ವಾಪರ ವಿಚಾರಿಸಿಕೊಳ್ಳುತ್ತಿದ್ದರು,– ಹತ್ತಿರ ಇದ್ದವರಿಂದ. ಆಗಾಗ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರ ಹೆಸರೂ ಮರೆತು ಹೋಗಿ ಅವರಿಗೆ ಸಾಕಷ್ಟು ಮನಸ್ಸಿನ ಗೊಂದಲಕ್ಕೆ ಕಾರಣವಾಗುತ್ತಿತ್ತು. ಪುಟಗಟ್ಟಲೆ ಹೇಳಿ ಬರಸುತ್ತಿದ್ದವರಿಗೆ ಎರಡು ಸಾಲು cogent ಆಗಿ, coherent ಆಗಿ ಹೇಳಿ ಬರಸಲಾಗುತ್ತಿರಲಿಲ್ಲ. ಒಂದೆರಡು ಮಾತುಗಳಲ್ಲಿ ಅರ್ಥಮರ್ಥ ಏನನ್ನಾದರೂ ಹೇಳಿ, ಅದನ್ನು ಬೆಳಸಿ ಕಾಗದ ಬರೆಯಲು ಸೂಡಿಸುತ್ತಿದ್ದರು. ಅವರ ಮನಸ್ಸಿನ ಲಹರಿಯನ್ನು ತಿಳಿದವರಿಗೆ ಅದು ಕಷ್ಟವಾಗುತ್ತಿರಲಿಲ್ಲ; ಆದರೆ ಅಂಥವಲ್ಲಿ "ವಿ. ಸೀ. ಮುದ್ರೆ" ಇರುತ್ತಿರಲಿಲ್ಲ. ಬೇರೆ ಯವರದೆಂದು ಸುಲಭವಾಗಿ ಗುರುತಿಸಬಹುದಾಗಿತ್ತು. ಬರುವ ಕಾಗದಗಳಿಗೆ ಉತ್ತರಿಸು ವುದು, ಪ್ರೆಸ್ ಪ್ರೂಫ್ ತಿದ್ದುವುದು ಇತ್ಯಾದಿ ನಮ್ಮ ಪಾಲಿಗೇ ಬಂದವು. ಹಿಂದೆ ಕನ್ನಡಿಸುತ್ತಿದ್ದು ಮಾತು ನಿಂತ ಮೇಲೆ ಅರ್ಧಕ್ಕೇ ನಿಂತಿದ್ದ ಬರ್‌ಟ್ರೆಂಡ್ ರಸೆಲ್ಲರ "Roads to Freedom" ಕೃತಿಯ ಭಾಷಾಂತರವನ್ನು ಎರಡು ಮೂರು ತಿಂಗಳ ಅನಂತರ ಒಮ್ಮೆ ಮುಂದುವರಿಸಲು ಯತ್ನಿಸಿದರು. ಪ್ರಯತ್ನ ಸಫಲವಾಗಲಿಲ್ಲ. ತಕ್ಷಣ ಎಲ್ಲ ಸಾಹಿತ್ಯಕ ಕೆಲಸವನ್ನು ನಿಲ್ಲಿಸಲು ನಿರ್ಧರಿಸಿದರು; ನಿಲ್ಲಿಸಿಯೂ ಬಿಟ್ಟರು. ಆದಕ್ಕೆ ಮುಂಚಿತವಾಗಿ ಕೈಕೊಂಡಿದ್ದ ಕ್ಯಾಂಬೆಲ್ ಜಾನ್ಸನ್‌ರ "Mission with Mount batten ಭಾಷಾಂತರದ ಕೆಲಸ ಪೂರ್ತಿ ಮುಗಿಯುವಂತಾದ್ದು ಸಮಾಧಾನದ ಸಂಗತಿ. ಹಾಗೆಯೇ 1964 ರಷ್ಟು ಹಿಂದೆ USIS ನವರಿಗಾಗಿ ಭಾಷಾಂತರಿಸಿದ್ದು, ಕಾರಣಾಂತರ

ಗಳಿಂದ ಅದ ಪ್ರಕಟವಾಗದೆ ಹೋಗಿ, ಸುಮಾರು 18 ವರ್ಷಗಳ ಅಜ್ಞಾತವಾಸ ಮುಗಿಸಿ, ಬೆಂಗಳೂರು ವಿಶ್ವವಿದ್ಯಾನಿಲಯದ ಗೆಳೆಯರು ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಶ್ರೀ ಕೆ. ಸಿ. ಶಿವಪ್ಪ ಅವರ ವಿಶ್ವಾಸದಿಂದಾಗಿ ಬೇಗ ಅಚ್ಚಾಗಿ, ವಿ. ಸೀ. ಕಣ್ಮುಚ್ಚುವ ಕೆಲವು ವಾರ ಮುಂಚೆ ಪ್ರಕಟವಾದ ಮೆಲ್‌ವಿಲ್‌ನ ಬೃಹದ್ ಕಾದಂಬರಿ 'ಮೋಬಿ ಡಿಕ್' ಹೊರಬಂದದ್ದು ಅವರ ಮನಸ್ಸಿಗೆ ಹರ್ಷ ಕೊಟ್ಟದ್ದನ್ನು ನೆನೆಯಬೇಕೆನಿಸುತ್ತದೆ.

ಆಡುವ ಮಾತು ಅರ್ಧರ್ಧಕ್ಕೇ ನಿಂತು ಅವರನ್ನು ತುಂಬ ಪೇಚಿಗೆ ಸಿಕ್ಕಿಸುತ್ತಿತ್ತು. ಏನನ್ನೊ ಹೇಳ ಹೋಗುವುದು, ಪ್ರಯಾಸ ಪಟ್ಟು ನಾಲ್ಕು ಪದ ಹೇಳುವುದು, ಮುಂದಿನದು ಮರೆತು ಹೋಗಿ ಮಾತಿಗೆ ತಡವರಿಸುವುದು, 'ಹೀಗಾಗಿ ಹೋಯಿತಲ್ಲ' ಎಂದು ಪೇಚಾಡುವುದು, ಮರುಕ್ಷಣ ಅಸಹಾಯಕರಾಗಿ ಪೆಚ್ಚು ನಗೆ ನಕ್ಕು ಬಿಡುವುದು- ದಿನವೂ ಕಾಣಬಹುದಿತ್ತು. ಆ ನಗೆಯ ಹಿಂದಿನ ನೋವು ನುಡಿಗೆ ನಿಲುಕದ್ದು.... ಒನ್ಮೆ ಆದರ ಪೆಚ್ಚು ನಗೆ ಅಪಾರ್ಥಕ್ಕೆ ಎಡೆಕೊಡುವಷ್ಟು ದೂರ ಹೋಯಿತು. ನಿಡು ಗಾಲದ ಮಿತ್ರರಾದ ಪ್ರೊ. ಎ-ಎನ್. ಮೂರ್ತಿರಾಯರು ಕಂಡು ಹೋಗಲು ಒಂದು ದಿನ ಬಂದರು. ವಿ. ಸೀ. ಪ್ರಯಾಸಪಟ್ಟು ಯೋಗಕ್ಷೇಮ ವಿಚಾರಿಸಿದರು. 'ನೋಡಿ ಹೀಗದೀನಿ, ಎಲ್ಲ ನಿಮಗೆ ಗೊತ್ತಿರುವುದೇ ತಾನೇ ?' ಎಂದರು ರಾಯರು. ಮುಂದೆ ಏನೊ ಮಾತನಾಡಲು ಹೋದ ವಿ. ಸೀ. ಸಾಧ್ಯವಾಗದೆ ತಮ್ಮ ಅಸಹಾಯಕತೆಯ ಅರಿವಾಗಿ ಪೆಚ್ಚು ಪೆಚ್ಚಾಗಿ ನಕ್ಕು ಬಿಟ್ಟರು. ರಾಯರಿಗೆ ಈ ನಗೆ ಬಹುಶಃ ಅಪಹಾಸ್ಯ ದ್ವನ್ನಿಸಿ ಬೇಸರವಾಯಿತೇನೊ : 'ನನ್ನ ಸ್ಥಿತಿ ಕಂಡು ಎಲ್ಲರೂ ನಗುವ ಹಾಗಾಯಿತಲ್ಲ!' ಎಂಬಂತೆ ಥಟ್ಟನೆ ನುಡಿದುಬಿಟ್ಟರು. ಸುದೈವಕ್ಕೆ ವಿ. ಸೀ. ಅವರಿಗೆ ಇದು ಕೇಳಿಸಲಿಲ್ಲ ; ಕೇಳಿದ್ದರೆ ಬಹುವಾಗಿ ನೊಂದು ಕೊಳ್ಳುತ್ತಿದ್ದರು. ಹತ್ತಿರವಿದ್ದ ಹಿರಿಯ ಮಗ ಕೃಷ್ಣ ಮೂರ್ತಿ ರಾಯರಿಗೆ ಪರಿಸ್ಥಿತಿ ವಿವರಿಸಿ ದಯಮಾಡಿ ಬೇಸರಪಟ್ಟು ಕೊಳ್ಳದಿರಲು ಪ್ರಾರ್ಥಿಸಿದರು. ಪ್ರೊ. ರಾಯರು ಇದನ್ನು ವಿಶ್ವಾಸದಿಂದ ಖಂಡಿತಕ್ಕೂ ಮರೆತಿದ್ದರು.... ಆ ಪ್ರಸಂಗ ಆದ ಮೇಲೆ ಅವರನ್ನು ಕಾಣಲು ಬಂದವರಿಗೆ ಯಾರಾದರೂ ಸೂಕ್ಷ್ಮವಾಗಿ ಮೊದಲೇ ಅವರ ಈ ಅಸಹಾಯಕತೆಯ ಸುಳಿವನ್ನು ಕೊಡುತ್ತಿದ್ದರಾಗಿ ಪುನಃ ಅಂಥ ಪ್ರಸಂಗ ಒದಗಲಿಲ್ಲವಾದರೂ ಹತ್ತಿರದವರಿಗೆ, ಅವರನ್ನು ಆ ದಿನಗಳಲ್ಲಿ ಹೆಚ್ಚು ಕಂಡ ತರಿಗಲ್ಲದೆ ಅವರ ಪೆಚ್ಚು ನಗೆಯ ಅರ್ಥ ಆಗುತ್ತಿರಲಿಲ್ಲ. ಆಕಸ್ಮಾತ್ ಕಂಡವರಿಗಂತೂ ಅದು ಹೀಗೆ ಅಪಾರ್ಥಕ್ಕೆಡೆ ಕೊಟ್ಟು ಪ್ರಸಂಗವನ್ನು ದುರ್ಭರಗೊಳಿಸುತ್ತಿತ್ತು.

ಬೌದ್ಧಿಕ ಸಾಹಿತ್ಯಕ ಬದುಕು ಕೊನೆಗೊಂಡ ಮೇಲೆ ಅವರ ಜೀವನ ಶ್ರದ್ಧೆ, ಉತ್ಸಾಹ ಕುಗ್ಗಿತೆಂದೇ ಹೇಳಬೇಕು. 'ಆಯಿತ್ರಿ, ಇನ್ನು ಬೇಗ ಹೋಗಿ ಬಿಡಬೇಕ್ರಿ,' 'ಯಾಕ್ರಿ ಇರಬೇಕು ಇನ್ನು ?' 'I Should pop off' ಎಂಬಥ ಮಾತು ಅವರಿಂದ ದಿನಕ್ಕೊಮ್ಮೆಯಾದರೂ ಬರುತ್ತಿತ್ತು. ದೇಹ ದೌರ್ಬಲ್ಯ ಹೆಚ್ಚುತ್ತಿದ್ದಂತೆ ಸಹಜವಾಗಿ ಆಗ ಈಗ ಕಾರಣವಿಲ್ಲದೆ ಗಾಬರಿ , ಸ್ವಲ್ಪ ಮುಂಗೋಪ ಸುಳಿಯುತ್ತಿತ್ತು. ಸ್ವಲ್ಪ

ಮಕ್ಕಳ ಗಲಾಟೆಯಿದ್ದರೂ ಸಿಡಿಮಿಡಿ ಗೊಳ್ಳುತ್ತಿದ್ದರು. ಆಗಬೇಕಿದ್ದ ಕೆಲಸ ನಿರ್ದೇಶಿತ ಸಮಯದಲ್ಲಿ ಆಗಿದಿದ್ದರೆ ಅಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಆದರೆ ಅಂಥ ಸಂದರ್ಭ ತೀರ ಅಪರೂಪ, ವಿರಳ. ಸಾಮಾನ್ಯವಾಗಿ ಸರ್ವದಾ ಶಾಂತರಾಗಿ, ಸೌಮ್ಯರಾಗಿ, ಸಮಾಧಾನ ಚಿತ್ತರಾಗಿ ಅನುದ್ವಿಗ್ನರಾಗಿ ಆಡುವ ನಾಲ್ಕು ಮಾತಿನಲ್ಲಿ ವಿನಯ, ಸೌಜನ್ಯ, ಕೃತಜ್ಞತಾಭಾವ,-ಭಾವುಕತೆ ದಿನೇ ದಿನೇ ಹೆಚ್ಚುತ್ತಿತ್ತು. ಹೊರನೋಟಕ್ಕೆ, ತೋರಿಕೆಗೆ ಹಾಗೆ ನುಡಿದದ್ದಲ್ಲ; ತೀರ ಪ್ರಾಮಾಣಿಕವಾಗಿ, ಹೃದಯದಿಂದ ನೇರ ಬಂದಂಥ ನೈಜ ಮಾತು ಅವು. ಆತ್ಮದ ಜೀವ ಗುಣವನ್ನು ಕಾಣಿಸುವಂಥವು. ಯಾರಿಂದ ಅತ್ಯಲ್ಪ ಸೇವೆ, ಸಹಾಯ, ವಿಶ್ವಾಸ ಸ್ವೀಕರಿಸಿದರೂ ಅಂಥವರಿಗೆ ತಾವು ತುಂಬ ಋಣಿ ಎಂಬಂತೆ ಮುಖದಲ್ಲಿ ಸಂಜ್ಞೆಯಲ್ಲಿ ಕಾಣಿಸಿ, ತೀರ ಹತ್ತಿರದವರಿಗೂ ಕಿರಿಯರಿಗೂ ಮಕ್ಕಳಿಗೂ ಒಮ್ಮೊಮ್ಮೆ ಎರಡೂ ಕೈ ಜೋಡಿಸಿ ಕೈಮುಗಿದು ಬಿಡುತ್ತಿದ್ದರು. ಆ ದೃಶ್ಯ ಹೃದಯವನ್ನು ತಟ್ಟುತ್ತಿತ್ತು. ಕಂಡವರಿಗೆ ಕಸಿವಿಸಿ, ಸಂಕೋಚ, ಸಂಕಟ ಆಗುತ್ತಿತ್ತು. ಆದರೆ ಆಗೆಲ್ಲ ಅವರ ಕಣ್ಣಲ್ಲಿ, ಮುಖದಲ್ಲಿ ಕಾಣುತ್ತಿದ್ದ ಜೀವದ ಸ್ನಿಗ್ಧತೆ, ಪಕ್ವತೆ ಹಣ್ತನ ಕೇವಲ ಕಂಡು ಅರಿಯಬೇಕೇ ಹೊರತು ವರ್ಣಿಸಲಾಗದ್ದು.

ಕೇಳದ ಕಿವಿ, ಕಾಣದ ಕಣ್ಣು, ಅಸ್ಥಿರ ಹೆಜ್ಜೆ, ನಿಂತ ಮಾತು, ಹೆಚ್ಚಿದ ದೇಹ ದೌರ್ಬಲ್ಯ ಅವರನ್ನು ಹಣ್ಣು ಮಾಡಿತ್ತು. ದಿನೇ ದಿನೇ ಹೆಜ್ಜೆ ಹೆಚ್ಚು ಅಸ್ಥಿರವಾಗುತ್ತಿತ್ತು, ದೇಹ ದುರ್ಬಲಗೊಳ್ಳುತ್ತಿತ್ತು. ಹತ್ತು ಹೆಜ್ಜೆ ಮನೆಯ ಒಳಗೂ ನಡೆಯಲಾಗುತ್ತಿರಲಿಲ್ಲ. ನಡೆಯದೆ ಇರಲೂ ಅವರ ಜೀವ ಒಪ್ಪುತ್ತಿರಲಿಲ್ಲ. ಹೀಗಾಗಿ ಚಡಪಡಿಸುತ್ತಿದ್ದರು. ದಿನವಿಡೀ ಕುಳಿತಲ್ಲೇ-ತಮ್ಮ ಪ್ರತ್ಯೇಕ ಕೊಠಡಿಯ ಒಳಗೆ ಮಂಚದ ಅಥವಾ ಕುರ್ಚಿಯ ಮೇಲೆ, ಅಥವಾ ಮುಂದಿನ ಕೈಸಾಲೆಯ ಒಂದು ಮೂಲೆಯಲ್ಲಿ ಕುರ್ಚಿಯ ಮೇಲೆ–ಕುಳಿತಿದ್ದರು. ಹಾಗೆ ಇರಲು ಬೇಸರ; ಸಹಜವೇ. ಆದರೆ ಬೇರೆ ಶಕ್ಯತೆಯಿರಿರಲಿಲ್ಲ. ಕುಳಿತು ಕೈ ನೀಡಿಕೊಳ್ಳ ಬಹುದಾಗಿದ್ದ ಬೆತ್ತದ ಕುರ್ಚಿ (ಅವರ ಮೃದು ದೇಹವನ್ನು ಅದು ಅದೆಷ್ಟು ನೋಯಿಸುತ್ತಿತ್ತೊ ಎಂದು ಹಲವಾರು ಬಾರಿ ಅನ್ನಿಸಿದ್ದುಂಟು); ಆಧಾರ, ಆಸರೆ ಎಂದು ತೀರ ಹತ್ತಿರದಲ್ಲಿ ಇನ್ನೊಂದು ಕುರ್ಚಿ (ಮರದ್ದು); ಅದರ ಹೆಗಲ ಮೇಲೆ ಕೈ ಇಟ್ಟು ಅದುರುವ ಕೈಗಳಿಂದ, ತತ್ತರಿಸುವ ಕಾಲುಗಳಿಂದ ಬೀದಿ ಬಾಗಿಲನ್ನು ಹಿಡಿದು, ಎರಡು ಹೆಜ್ಜೆ ನೆಲವನ್ನು ಸವರಿ ಸವರಿ ಮುಂದೆ ನಡೆದು–ನಡೆದು ಎನ್ನುವುದಕ್ಕಿಂತ Skating ಎನ್ನಲೆ ?– ಅವರ ಕೊಠಡಿಯ ಬಾಗಿಲನ್ನು ಹಿಡಿದು ಒಳಗೆ ಚಿಮ್ಮುವುದು ; ಹತ್ತಿರವಿದ್ದ ಪುಸ್ತಕ ಕಪಾಟಿನದೊ ಕುರ್ಚಿಯದೇ ಆಸರೆ ಪಡೆದು ಇನ್ನಷ್ಟು ಮುಂದುವರಿದು ಮಂಚದ ಮೇಲೊ ಇನ್ನೊಂದು ಬೆತ್ತದ ಬೆತ್ತದ ಕುರ್ಚಿಯ ಮೇಲೊ ಕೂರುವುದು. ಆಯತಪ್ಪಿ ನಾಲ್ಕಾರು ಸಲ ಜಾರಿ ಬಿದ್ದು ಕೈಕಾಲು ಗಾಯವಾಗಿ ಬೇಗವಾಯದೆ ಹೋಗಿ ಅವರ ಮನಸ್ಸಿನ ಶಂಕೆ ಭೀತಿಯಿತು. ಮುಂದೆ ತೀರ ನಡೆಯಲು ಆಗದಾದಾಗ ಕೈಹಿಡಿದೊ ಎದೆಗೊರಗಿಸಿ ಕೊಂಡೊ ಹೆಜ್ಜೆ ಹಾಕಿಸಬೇಕಿತ್ತು. ಅಥವಾ ಕುರ್ಚಿಯಲ್ಲಿ ಕುಳ್ಳಿರಿಸಿ ಕೊಂಡು ಆ

ಕಡೆ ಈ ಕಡೆ ಒಬ್ಬೊಬ್ಬರು ಎತ್ತಿ ಕರೆತರಬೇಕಿತ್ತು. ಸ್ನಾನಾದಿ ಮುಗಿಸಿ ಬೆಳಿಗ್ಗೆ ಸುಮಾರು 9–9:30ರ ಹೊತ್ತಿಗೆ ಕೊಠಡಿಯ ಮುಂದಿನ ಕೈಸಾಲೆಯಲ್ಲಿ ಕುಳಿತರೆ ಮಧ್ಯಾಹ್ನ ಊಟವಾಗಿ ವಿಶ್ರಾಂತಿಗೆಂದು ಸ್ವಲ್ಪ ಹೊತ್ತು ಕೊಠಡಿಯಲ್ಲಿರುತ್ತಿದ್ದರು. ಪುನಃ ನಾಲ್ಕೂವರೆಯ ಹೊತ್ತಿಗೆ ಕೈಸಾಲೆಗೆ. ಅಥವಾ ಬಿಸಿಲು ಕಂದಿದ ಮೇಲೆ ಕಾಂಪೌಂಡಲ್ಲಿದ್ದ ಕಲ್ಲು ಹಾಸಿನ ಮೇಲೆ ಕುಳಿತಿರುವುದು ಸಾಮಾನ್ಯ ದಿನಚರಿ. ಬೆಳಿಗ್ಗೆ ಆ ಹೊತ್ತಿಗೆ ಮಕ್ಕಳು ಆಫೀಸಿಗೆ, ಮೊಮ್ಮಕ್ಕಳು ಸ್ಕೂಲಿಗೆ ಹೋಗುವರು. ಅವರನ್ನು ಬೀಳ್ಕೊಡುವರು. ಮುಂದಿದ್ದ ರಸ್ತೆಯಲ್ಲಿ ಶಾಲೆಗಳಿಗೆ ಹೋಗುವ ಅಸಂಖ್ಯ ಮಕ್ಕಳು, ಆಫೀಸಿಗೆ ಇತರ ಕೆಲಸಗಳಿಗೆ ಸಾಗುವ ಮಂದಿಯನ್ನು–ಈ ಮಾನವ ಮೆರವಣಿಗೆಯನ್ನು–ದೂರದಿಂದ ನಿಟ್ಟಿಸುತ್ತ ಕೂರುವುದು. ಮನೆಯ ಮುಂದಿದ್ದ ಹಸಿರಿಗೆ ದಿಟ್ಟಿ ಹಾಯಿಸುವುದು. ಗಾಳಿ ಬಿಸಿಲು ಬೆಳಕು ಅವರಿಗೆ ಬೇಕು. ಸರ್ವದಾ ಮನುಷ್ಯ ಸಂಪರ್ಕ, ಸಂಸರ್ಗದಲ್ಲಿಯೇ ಹೆಚ್ಚು ಕಾಲ ಕಳೆಯುತ್ತಿದ್ದವರು, ಜೀವನದ ಸಮಸ್ತ ಸೌಭಾಗ್ಯಕ್ಕೂ ಮಿಡಿಯುತ್ತಿದ್ದವರು: ಈಗ ಈ ದೂರದ ನೋಟಕ್ಕೆ, ಒಂದೆರಡು ಮಾತಿಗೆ, ಹೆಚ್ಚು ಮೌನಕ್ಕೇ ತೃಪ್ತಿಪಟ್ಟುಕೊಳ್ಳಬೇಕಿತ್ತು. ಸಂಜೆ ಪುನಃ ಬೆಳಗಿನದೇ ದೃಶ್ಯದ ಪುನರಾವರ್ತನೆ: ಶಾಲೆಗಳಿಂದ ಮೊಮ್ಮಕ್ಕಳು, ಇತರ ಅಸಂಖ್ಯ ಮಕ್ಕಳು, ಆಫೀಸು ಫ್ಯಾಕ್ಟರಿಗಳಿಂದ ಮಕ್ಕಳು ಮನೆಗೆ ಬರುವ ಸಮಯಕ್ಕೆ ತಮ್ಮ ಎಂದಿನ ಸ್ಥಳದಲ್ಲಿ ಉಪಸ್ಥಿತರು. ಆಗಾಗ ಅವರು ಇವರು ನೋಡಲು ಬಂದವರೊಡನೆ ಅರೆ ತಾಸು ಕುಳಿತಿರುತ್ತಿದ್ದರು, ಕಳೆಯುತ್ತಿದ್ದರು. ಕ್ರಮೇಣ ಬರುವವರೂ ವಿರಳವಾಗುತ್ತಿದ್ದರು. ಅವರನ್ನು ಆ ಸ್ಥಿತಿಯಲ್ಲಿ ನೋಡುವುದು ಕಷ್ಟವಾಗುತ್ತದೆಂದು ಕೆಲವರು ಬರಿದಿದ್ದರೆ, ಇನ್ನು ಕೆಲವರು ಆ ಸೋಗು, ನೆಪಹಾಕಿ ದೂರವಿರುತ್ತಿದ್ದರು.... ಮನುಷ್ಯನ ಹಿಪೊಕ್ರಸಿಗೆ ಮಿತಿಯೆಲ್ಲಿ?

ಅಭ್ಯಾಸ ಬಲದಿಂದೆಂಬಂತೆ ದಿನಪತ್ರಿಕೆಗಳ ಓದು, ನಾಲ್ಕು ಬಾರಿ ವಾರ್ತಾ ಶ್ರವಣ ತಪ್ಪದೆ ನಡೆಯುತ್ತಿತ್ತು. TLS, ಲಿಸನರ್ ಸಂಚಿಕೆಗಳನ್ನೂ ಇನ್ನಿತರ ಪುಸ್ತಕಗಳನ್ನೂ ಓದುತ್ತಿದ್ದುದು ಉಂಟು. serious reading ಅಂತೂ ಸುತರಾಂ ಶಕ್ಯವಿರಲಿಲ್ಲ. 'ಯಾವುದೂ ಜ್ಞಾಪಕದಲ್ಲಿ ಉಳಿಯೋಲ್ಲ' 'ತಲೆಯಲ್ಲಿ ರಿಜಿಸ್ಟರ್ ಆಗೋಲ್ಲ' ಎಂದು ಪದೇ ಪದೇ ಹೇಳುತ್ತಿದ್ದರು. ಆದರೂ ಅವುಗಳ ಮೇಲೆ ಕಣ್ಣಾಡಿಸುವುದು ತಪ್ಪುತ್ತಿರಲಿಲ್ಲ. ಏನೂ ಇಲ್ಲದಿದ್ದರೆ ಎದುರಿಗಿದ್ದ ನೀಲ ಆಕಾಶವೊ ಚಿಲಿಪಿಲಿ ಗುಟ್ಟುತ್ತಿರುವ ಗುಬ್ಬಚ್ಚಿಗಳೊ ಸಂಚರಿಸುತ್ತಿರುವ ಮನುಷ್ಯ ಮುಖಗಳ ನೋಟವೊ ಅವರ ನಿತ್ಯ ಸಂಗಾತಿಗಳು. ಆಗೆಲ್ಲ ಅಂತರ್ಮುಖಿಯಾಗಿ ಏನೊ ಮೌನ ಮೆಲುಕು ಹಾಕುತ್ತಿರುವವರೇನೇ ಎನಿಸುತ್ತಿತ್ತು.

ತಮ್ಮ ಸ್ಥಿತಿ ಹೀಗಾಗಿ ಹೋಯಿತೆಂಬ ವಿಷಾದ, ವಿಷಣ್ಣತೆ ಅವರನ್ನು ಬಹುವಾಗಿ ಕುಗ್ಗಿಸಿತ್ತು. ಆದರೆ ಆ ಅನಿವಾರ್ಯತೆಯನ್ನು ಅವರು ತಾಳಿಕೊಂಡುದು, ತಮ್ಮನ್ನು ತಾವು ಸಮಾಧಾನ ಮಾಡಿಕೊಂಡುದು ದೊಡ್ಡ ಸಾಧನೆ ಎನ್ನಬೇಕು.

ಅದಕ್ಕಿಂತ ಹೆಚ್ಚಾಗಿ ಪ್ರತಿಯೊಂದಕ್ಕೂ ಇತರರ ಮೇಲಿನ ಅವಲಂಬನ ಅವರಿಗೆ ದೊಡ್ಡ ದೊಡ್ಡ ಕೊರಗಾಗಿತ್ತು. ಸ್ವಭಾವತಃ ಎಲ್ಲದರಲ್ಲಿಯೂ ಬಹು ಸಂಕೋಚ ಪ್ರವೃತ್ತಿಯವರಾಗಿದ್ದ ಅವರು ಯಾರನ್ನೂ–ತಮ್ಮ ಮಕ್ಕಳನ್ನು–ತಮ್ಮ ಮೈಕೈ ಮುಟ್ಟಲು ಬಿಡುತ್ತಿದ್ದವರಲ್ಲ : ನಾವು ಕಂಡಂತೆ. ಈಗ ವಿಧಿಯಿಲ್ಲವಾಗಿದ್ದರೂ ಬಹುವಾಗಿ ಅದಕ್ಕಾಗಿ ಮುಜುಗರ ಪಟ್ಟುಕೊಳ್ಳುತ್ತಿದ್ದರು. ಮಕ್ಕಳು ಸೊಸೆಯಂದಿರು ಚೆನ್ನಾಗಿ ನೋಡಿಕೊಂಡರು. ವಿದ್ಯಾರ್ಥಿ ದೆಸೆಯಿಂದ ಅವರನ್ನು ಬಲ್ಲ ಡಾ. ಡಿ. ರಾಮರಾಯರು ಉದ್ದಕ್ಕೂ ವೈದ್ಯಕೀಯ ನೆರವು ನೀಡಿದರು. 30–35 ವರ್ಷಗಳಿಂದ ತುಂಬ ಹತ್ತಿರದಲ್ಲಿದ್ದು, ಅವರನ್ನು ತಾಯಿಯಂತೆ ಅತಿಶಯ ವಿಶ್ವಾಸದಲ್ಲಿ ನೋಡಿಕೊಂಡು–ಕಾಪಾಡಿದ–ಕಿರಿಯ ಸ್ನೇಹಿತ ಶ್ರೀ ಸೀನಣ್ಣ (ಶ್ರೀನಿವಾಸಮೂರ್ತಿ)ನನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕು. ವಿ. ಸೀ. ಯವರಿಗೆ ಆತ ಸಲ್ಲಿಸಿದ ಸೇವೆ ತುಂಬ ಹಾರ್ದವಾದ್ದು, ಸ್ನಿಗ್ಧವಾದದ್ದು, ನಿಸ್ವಾರ್ಥವಾದದ್ದು. ಕೊನೆಯ ನಾಲ್ಕೈದು ವರ್ಷಗಳಲ್ಲಂತೂ ಆತ ಸಲ್ಲಿಸಿದ ಸೇವೆಯಿರಲಿಲ್ಲ. ಅವರ ಬದುಕನ್ನು ಆ ದಿನಗಳಲ್ಲಿ ಸಹ್ಯಗೊಳಿಸಿದ ಮಹಾನುಭಾವ ಆತ,

ಹತ್ತಿರದ ಹಿರಿಯರು, ಗೆಳೆಯರು ಹಲವರು ಕಣ್ಮುಂದೆ ತೀರಿಕೊಂಡದ್ದು ಅವರ ಅವರ ಒಂಟಿತನವನ್ನು ಏಕಾಕಿ ತನ್ನವನ್ನು ಹೆಚ್ಚಿಸಿತು. ಬಲಗೈಯಂತಿದ್ದು ತುಂಬು ನೆರವಾಗಿ ಸೋದರ ಒಬ್ಬರು, ದೂರದ ಹರಿದ್ವಾರದಲ್ಲಿದ್ದ ಭಾವಂದಿರು, ಪೂಜ್ಯಸ್ಥಾನದಲ್ಲಿದ್ದು ರಾಳ್ಲಪಲ್ಲಿಯವರು, ಸ್ನೇಹಿತರು ಜಿ.ಪಿ. ರಾಜರತ್ನಂ. ವಿ. ರಾಘವನ್, ಕೆ.ವಿ. ಅಯ್ಯರ್, ಮಹನೀಯರು ಬೇಂದ್ರೆ ಎಲ್ಲ ತೀರಿಕೊಂಡರು. ಸ್ವಲ್ಪ ಅವರ ಮನಸ್ಸಿನ ನೆಮ್ಮದಿಯನ್ನು ಇದು ಕಲಕಿತ್ತು. 'I am next in Q' ಎಂದ ಹೇಳುತ್ತಲೇ ಇರುತ್ತಿದ್ದರು. ಉಪಯೋಗ ವಿಲ್ಲದ ಈ ಬದುಕು ಇನ್ನು ಏತಕ್ಕೆ, ಬೇಗ ಮುಗಿಯಬೇಕು ಎನ್ನುತ್ತಿದ್ದರು. ಇದ್ದಕ್ಕಿದ್ದಂತೆ ತೀರ ಅನಿರೀಕ್ಷಿತವಾಗಿ ಸದ್ದುಗದ್ದಲವಿಲ್ಲದೆ ತಮ್ಮ ಬದುಕನ್ನು ತಾವು ಬಯಸಿದ್ದಂತೆ ತಮ್ಮದೇ ಕೋಣೆಯಲ್ಲಿ ಪುಸ್ತಕ ಪ್ರಪಂಚದ ನಡುವೆ ಮುಗಿಸಿಬಿಟ್ಟರು. ಹೀಗೇ ಕಷ್ಟಪಟ್ಟು ಕೊಂಡಾದರೂ ನಮಗೊಂದು ನಚ್ಚಾಗಿ, ಧೈರ್ಯ ಸಂತೋಷಗಳಾಗಿ, ನಮ್ಮ ಆತ್ಮಸಾಕ್ಷಿ ಎಂಬಂತೆ ಇನ್ನೂ ನಾಲ್ಕರು ವರ್ಷ ನಮ್ಮೊಡನಿರಬಹುದೆಂದಿದ್ದವು. ನಿರೀಕ್ಷೆ ಹುಸಿಯಾಯಿತು. ಆದರೆ ಬದುಕು ಮುಗಿದ ಮುನ್ನ, ಬೆಳಕು ಆರುವ ಮೊದಲು ಇಪ್ಪತ್ತು ನಾಲ್ಕು ಗಂಟೆಗೂ ಹೆಚ್ಚು ಕಷ್ಟಪಟ್ಟರೆಂದು ಕೇಳಿದೆ. ಹೌದು, ಕೇಳಿದೆ. ಕಾಣಲಿಲ್ಲ. ಅಂಥ ಸಜ್ಜನರಿಗೆ, ಮೃದು ಹೃದಯಿಗೆ, ಅಜಾತಶತ್ರುಗೆ ಕೊನೆಗಾಲ ಏಕೆ, ಅಷ್ಟು ಕಷ್ಟಕರದ್ದಾಯಿತೊ ಅರ್ಥವಾಗುತ್ತಿಲ್ಲ....ಇಪ್ಪತ್ತು–ಇಪ್ಪತ್ತು ನಾಲ್ಕು ವರ್ಷ ಸುಮಾರು ಅವರ ಹತ್ತಿರದಲ್ಲಿರುವ ಸೌಭಾಗ್ಯ ದೊರೆತಿದ್ದ ನನಗೆ ಅವರ ಆ ನೋವನ್ನು ಕಾಣಿಸಬಾರದೆಂದೊ ಏನೊ ವಿಧಿ ಕೊನೆಯ ಇಪ್ಪತ್ತು ನಾಲ್ಕು ಗಂಟೆ ಮಾತ್ರ

ದೂರದ ಹುಬ್ಬಳ್ಳಿ–ಬೆಳಗಾವಿಗೆ ಕರೆದೊಯ್ದಿತ್ತು. ಎಷ್ಟು ಬೇಗ ಎಂದರೂ ಹಿಂದಿರುಗಲು 8–10 ಗಂಟೆಗೆ ಬೇಕಾಗಿ ಅಂತಿಮ ದರ್ಶನವೂ ದೊರಕದಾಯಿತು....

4-9-1983ರ ಭಾನುವಾರ ಬೆಳಗೆ ವಿ. ಸೀ. ತೀರಿಕೊಂಡರು. ಹಿಂದಿನ ಶುಕ್ರವಾರ ಸಂಜೆ ಆರೂವರೆಗಂಟೆಯ ಹೊತ್ತಿಗೆ ಹುಬ್ಬಳ್ಳಿಗೆ ಹೊರಡುವ ಮುಂಚೆ ಏಕೊ ನೋಡಬೇಕೆನ್ನಿಸಿ, ಕಾಣಲು–ಹೋಗಿದ್ದೆ. ಸ್ವಲ್ಪ ಜ್ವರವಿದ್ದು ಮಂಚದ ಮೇಲೆ ಕಣ್ಣುಮುಚ್ಚಿ ಮಲಗಿದ್ದರು. ಮಂಪರಿನಲ್ಲಿ ಇದ್ದಂತೆ ಭಾಸವಾಯಿತು. ಸದ್ದಿಲ್ಲದೆ ಕುರ್ಚಿಯಲ್ಲಿ ಕುಳಿತೆ. ಬಹುಶಃ ಹೆಜ್ಜೆ ಸಪ್ಪಳ ಕೇಳಿ ಕಣ್ಣು ತೆರೆದರು. ಗುರುತಿಸಿದರು. 'ನೋಡಿದಿರಾ ಸ್ಥಿತಿ!' ಎಂಬಂತೆ ಅವರದೇ ಆದ ಒಂದು ವಿಶಿಷ್ಟ ರೀತಿ, ಭಂಗಿಯಲ್ಲಿ ಕಣ್ಣು ಮುಖ ಮಿನುಗಿಸಿದರು. ಹಣೆ ಮುಟ್ಟಿ ನೋಡಿ 'ಜ್ವರ ಹೆಚ್ಚೇನೂ ಇಲ್ಲ' ಎಂದೆ. ತುಟಿಯುಲುಗಿಸಿ ತೆಳುನಗೆ ನಕ್ಕರು. ಮುಂದಿನ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಪರಿಸ್ಥಿತಿ ವಿಷಮಿಸಬಹುದೆಂಬುದಕ್ಕೆ ಯಾವ ಸೂಚನೆಯೂ ಆಗ ಕಾಣಲಿಲ್ಲ. ಅತ್ಯಲ್ಪ ಸುಳಿವು ಸಿಕ್ಕಿದ್ದರೂ ನಾನು ಊರು ಬಿಟ್ಟು ಹೊರಡುತ್ತಿರಲಿಲ್ಲ. ಹತ್ತಾರು ಸಲ ಹಾಗೆ ಹೊರಟಿದ್ದು ಮನಸೊಪ್ಪದೆ ಮುಂದೂಡಿದ್ದೆ. ಈ ಸಲ ಸುಲಭವಾಗಿ ವಿಧಿ ವಂಚಿಸಿತು! ಹೆಚ್ಚು ವ್ಯವಧಾನವಿರಲಿಲ್ಲವಾಗಿ ಹೊರಡಬೇಕಿತ್ತು, ಹೊರಟೆ. ಪುನಃ ಅವರನ್ನು ಕಾಣಲಿಲ್ಲ. ಅವರ ಆ ನಿರ್ಮಲ ನಗೆ, ಕಣ್ಣ ಮಿನುಗು, ತುಟಿಯುಲುಗು, ಕಾಣಿಸಿದ ಆ ಮಂದಹಾಸವೇ ನನಗೆ ಅವರ ಕೊನೆಯ ನೋಟವಾಯಿತು. ಅದು ದಿವ್ಯ ಸ್ಮೃತಿಯಾಗಿ, ಹೃದಯದಲ್ಲಿ ಉಳಿದಿದೆ; ಶಾಶ್ವತವಾಗಿ ಉಳಿದಿರುತ್ತದೆ.

ಅನುಭಾವವು ಅನುಭಾವದ ಒಂದು ಪರಿಣಾಮವು ; ಪರಿಪಾಕವು. ಮೊದಲು ಅದೊಂದು ಜ್ಞೇಯ ಪರಿಪಾಕವು. ಅದರಿಂದಾಗುವ ಸೃಷ್ಟಿಜ್ಞಾನವು ಬೇರೆ ತರಗತಿಯದು. ಅನುಭಾವವು ಒಳಗಿನ ಭಾವಪರಿಪಾಕವು. ಅದರಿಂದ ಜೀವನಸಾಕ್ಷಸ್ವರೂಪದ ಬೇರೆ ನೆಲೆಗಾಣುವುದು. ಪ್ರಪಂಚದಲ್ಲದೊಂದು ಕ್ರಿಯಾಪರಿಪಾಕವು ; ಅನುಭಾವಿಯ ಸ್ವಿಮಿತ್ತಿಕವಾದ ಕರ್ತೃತ್ವಶಕ್ತಿಯೇ ಬೇರೆ ಜಾತಿಯದಾಗಿ ತೋರುವುದು. ಅನುಭವಕ್ಕೂ ಸಾದೃಶ್ಯವಿದೆ. ತಾದಾತ್ಮ್ಯವಿಲ್ಲ. ಅನುಭವವು ಅನುಭಾವಕ್ಕೆ ನಿಚ್ಚಣಿಕೆಯಾಗಬಲ್ಲುದಲ್ಲದೆ ಅದೇ ನಿಲುಕಡೆಯಾಗಲಾರದು.

ದ. ರಾ. ಬೇಂದ್ರೆ
(ವಿಚಾರ ಮಂಜರಿ)

ಪಿಕಾಸೋ–ಹೇಳಿಕೆಗಳು

1923 ಕನ್ನಡಕ್ಕೆ : ಎನ್. ಬಿ. ಚಂದ್ರಮೋಹನ್

[ಈ ಮುಂದಲ ಹೇಳಿಕೆ ಸ್ಪ್ಯಾನಿಷ್‌ನಲ್ಲಿ "ಮೇರಿಯಸ್ ಡಿ ಜಯಾಸ್"ಗೆ ಕೊಟ್ಟದ್ದು, ಡಿ ಜಯಾಸ್ ಹಸ್ತ ಪ್ರತಿಯನ್ನು ಪಿಕಾಸೋ ನೋಡಿ ಒಪ್ಪಿದ ಮೇಲೆಯೇ ದರ ಇಂಗ್ಲೀಷ್ ಅನುವಾದ "ಪಿಕಾಸೋ ಸ್ಪೀಕ್ಸ್" ಎಂಬ ಹೆಸರಲ್ಲಿ ನ್ಯೂಯಾರ್ಕಿನ "ದಿ ಆರ್ಟ್ಸ್" ಪತ್ರಿಕೆಯಲ್ಲಿ ಪ್ರಕಟವಾಯಿತು.]

ಆಧುನಿಕ ಚಿತ್ರಕಲೆಗೆ ಸಂಬಂಧಿಸಿದಂತೆ ಸಂಶೋಧನೆ (ರಿಸರ್ಚ್) ಶಬ್ದಕ್ಕೆ ಸಿಕ್ಕಿರುವ ಮಹತ್ವ ನನಗೆ ಅರ್ಥವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಚಿತ್ರಕಲೆಯ "ಶೋಧನೆ"ಗೆ ಅರ್ಥವೇ ಇಲ್ಲ. 'ಕಂಡುಕೊಳ್ಳುವುದು' (To find) ಎನ್ನುವುದೇ ಸರಿಯಾದ ಪದ. ಜೀವನವಿಡೀ ನೆಲದ ಮೇಲೆ ಕಣ್ಣು ಕೀಲಿಸಿಕೊಂಡು ಅದೃಷ್ಟ ತನ್ನ ಹಾದಿಯೊಳಗೆ ಇಡಬಹುದಾದ ಟಿಪ್ಪಣಿ ಪುಸ್ತಕವನ್ನು ಹುಡುಕುವ ವ್ಯಕ್ತಿಯ ಬಗೆಗೆ ಯಾರಿಗೂ ಕುತೂಹಲವಿರುವುದಿಲ್ಲ. ಹುಡುಕುವ ಉದ್ದಿಶ್ಯ ಇಲ್ಲದೆಯೇ–ಅದೇನಾದರೂ ಆಗಿರಲಿ–ಏನಾದರೊಂದನ್ನು ಕಂಡುಕೊಳ್ಳುವವನು, ನಮ್ಮ ಮೆಚ್ಚುಗೆಯನ್ನಲ್ಲ ದಿದ್ದರೂ ಕುತೂಹಲವನ್ನು ಕೆರಳಿಸುತ್ತಾನೆ.

ನಾನು ಮಾಡಿದ್ದೇನೆಂದು ಆಪಾದಿಸಲಾಗಿರುವ ಹಲವು ಪಾಪಗಳಲ್ಲಿ, ತೀರ ಸುಳ್ಳಾದದು ; ನನ್ನ ಕೃತಿಗಳಲ್ಲಿ ಪ್ರಮುಖ ಉದ್ದಿಶ್ಯವಾಗಿ 'ಸಂಶೋಧನಾ ಭಾವ'ವನ್ನು ನಾನು ಹೊಂದಿರುತ್ತೇನೆ ಎಂಬುದು. ನಾನು ನನ್ನ ವಸ್ತುವನ್ನು ಚಿತ್ರಿಸುವಾಗ 'ಕಾಣಿಸುವುದು', ನಾನು ಏನನ್ನು ಕಂಡೆನೆಂಬುದನ್ನೇ ಹೊರತು ಏನನ್ನು ಹುಡುಕು ತ್ತಿದ್ದೇನೆಂಬುದನ್ನಲ್ಲ. ಕಲೆಯಲ್ಲಿ ಉದ್ದಿಶ್ಯಗಳಷ್ಟೇ ಸಾಕುಗುವುದಿಲ್ಲ. ಸ್ಪ್ಯಾನಿಷ್ ನಲ್ಲಿ ಹೇಳುವಂತೆ "ಪ್ರೇಮ; ಸಂಗತಿಗಳಿಂದ ಸಾಧಿತವಾಗಬೇಕೇ ಹೊರತು ನಿಮಿತ್ತ ಗಳಿಂದ ಅಲ್ಲ". ಒಬ್ಬ ಏನು ಮಾಡಿದ್ದಾನೆಂಬುದು ಮುಖ್ಯವೇ ಹೊರತು, ಏನು ಮಾಡಲು ಉದ್ದೇಶಿಸಿದ್ದ ಎಂಬುದಲ್ಲ.

'ಕಲೆ' ಸತ್ಯವಲ್ಲ ಎಂಬುದು ನಮಗೆಲ್ಲಾಗೊತ್ತು. ಸತ್ಯವನ್ನು ನಮಗೆ ಸಾಕ್ಷಾತ್ಕರಿ ಸುವ ಸುಳ್ಳು–ಕಲೆ, ಕನಿಷ್ಠ, ಅರ್ಥೈಸಿಕೊಳ್ಳಲು ನಮಗೆ ದಕ್ಕಿರುವ ಸತ್ಯ. ತನ್ನ ಸುಳ್ಳುಗಳ ಸತ್ಯ ಸಂಧತೆಯನ್ನು ಜನರಿಗೆ ಯಾವ ರೀತಿಯಲ್ಲಿ ಒಪ್ಪಿಸಬೇಕೆಂಬುದನ್ನು ಕಲಾವಿದ ತಿಳಿದುಕೊಳ್ಳಬೇಕು. ಅದಿಲ್ಲದೆ ತನ್ನ ಶೋಧನೆ, ಸಂಶೋಧನೆಗಳನ್ನೇ ಪ್ರದರ್ಶಿಸುತ್ತ ತನ್ನ ಸುಳ್ಳುಗಳನ್ನು ಮರೆಸುವ ಹಾದಿ ಹಿಡಿದರೆ ಅವನು ಏನನ್ನೂ ಸಾಧಿಸಲಾರ.

ಸಂಶೋಧನೆಯ ಸಿದ್ಧಾಂತ ಬಹುತೇಕ ಚಿತ್ರಕಲೆ ದಾರಿ ತಪ್ಪುವಂತೆ ಮಾಡಿದೆ,

ಹಾಗೂ ಕಲಾವಿದನನ್ನು ಬೌದ್ಧಿಕ ಕಸರತ್ತಿನಲ್ಲಿ ಮುಳುಗಿಸಿ ಬಿಟ್ಟಿದೆ. ಆಧುನಿಕ ಚಿತ್ರಕಲೆಯ ಮೂಲಭೂತ ಅಪರಾಧ ಬಹುಶಃ ಇದೇನೆ. ಆಧುನಿಕ ಚಿತ್ರಕಲೆಯ ಸಂಪೂರ್ಣ ಸಾಧ್ಯತೆಗಳನ್ನಾಗಲೀ, ನಿರ್ದಿಷ್ಟ ಅಂಶಗಳನ್ನಾಗಲಿ ಪೂರ್ಣವಾಗಿ ಗ್ರಹಿಸದವನನ್ನ, ಈ ಸಂಶೋಧನೆಯು ಭಾವ ಹೊಲಗೆಡಿಸಿ ಅವರು ಅದೃಶ್ಯ-ಚಿತ್ರಣಕ್ಕೆ ತೊಡಗುವಂತೆ ಮತ್ತು ತನ್ಮೂಲಕ ಅ-ಚಿತ್ರಕರಾಗುವಂತೆ ಮಾಡುತ್ತದೆ.

ಆಧುನಿಕ ಚಿತ್ರಕಲೆಯ ವಿರುದ್ಧ ಸ್ವಾಭಾವಿಕ (naturalistic) ಸಿದ್ಧಾಂತದ ಮಾತಾಡುವವರು ಯಾರೊಬ್ಬರಾದರೂ ಅಂತ ಸಹಜ ಸ್ವಾಭಾವಿಕ ಕಲೆಯನ್ನು ನೋಡಿದ್ದಾರೇನೋ ನಾನಿನ್ನೂ ತಿಳಿಯಬೇಕಿದೆ. ಪರಸ್ಪರ ಭಿನ್ನವಾದ ಕಲೆ ಮತ್ತು ಪ್ರಕೃತಿಗಳು ಒಂದೇ ಆಗಿರುವುದಿಲ್ಲ. ಪ್ರಕೃತಿ ಏನು ಆಗಿದ್ದಿಲ್ಲ ಎಂಬ ನಮ್ಮ ಕಲ್ಪನೆಯನ್ನು ನಾವು ಕಲೆಯ ಮೂಲಕ ಅಭಿವ್ಯಕ್ತಿಸುತ್ತೇವೆ.

ವೆಲಾಕ್ವ್ಯೂಸ್ ತನ್ನ ಯುಗದ ಜನರ ಬಗೆಗಿನ ಆಲೋಚನೆಗಳನ್ನ ನಮಗೆ ಬಿಟ್ಟಿದ್ದಾನೆ. ನಿಸ್ಸಂಶಯವಾಗಿ ಅವರು ಅವನು ಚಿತ್ರಿಸಿದ್ದಕ್ಕಿಂತ ಬೇರೆಯೇ ಆಗಿದ್ದರು. ಆದರೆ ವೆಲಾಕ್ವ್ಯೂಸ್ ಚಿತ್ರಿಸಿದ ಒಬ್ಬನಿಗಿಂತ ಬೇರೊಬ್ಬ ಫಿಲಿಪ್ IVನನ್ನು ನಾವು ಕಲ್ಪಿಸಿಕೊಳ್ಳಲಾಗುವುದಿಲ್ಲ. ರೂಬೆನ್ಸ್ ಅದೇ ದೊರೆಯ ಸ್ವರೂಪವನ್ನು ಚಿತ್ರಿಸಿದರೂ, ರೂಬೆನ್ಸ್‌ನ ಆ ಸ್ವರೂಪ ಚಿತ್ರಣ ಬೇರೊಂದೇ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಆದರೂ ನಾವು ವೆಲಾಕ್ವ್ಯೂಸ್‌ನ ಸ್ವರೂಪ ಚಿತ್ರಣವನ್ನೇ-ನಮ್ಮನ್ನು ಒಪ್ಪಿಸುವ ಅವನ ಸಾಮರ್ಥ್ಯನ ಹಕ್ಕಿನಿಂದಾಗಿ-ನಂಬುತ್ತೇವೆ.

ಕಲಾವಿದರಲ್ಲಿ ಮೂಲದಿಂದಲೂ; ಸ್ಪಷ್ಟವಾಗಿ ಪ್ರಕೃತಿಯಿಂದ ಭಿನ್ನವಾದ ಕೃತಿಗಳನ್ನು ರಚಿಸಿದ ಪ್ರಾಚೀನರಿಂದ ಹಿಡಿದು ಡೇವಿಡ್ ಇಂಗ್ರೆಸ್ ಮತ್ತು ಬೊಗೆರಿಯೇ ಮೊನೆರಿ-ಅಂತ ಕಲಾವಿದರ ತನಕ ಎಲ್ಲರೂ ಪ್ರಕೃತಿಯನ್ನು ಅದು ಇದ್ದ ಹಾಗೆಯೇ ಚಿತ್ರಿಸಲು ನಂಬಿದ್ದರೂ ಕಲೆ ಕಲೆಯಾಗಿಯೇ ಉಳಿದಿದ್ದು ಪ್ರಕೃತಿ ಆಗಲಿಲ್ಲ. ಕಲೆಯ ದೃಷ್ಟಿಯಿಂದ ಮೂರ್ತ-ಅಮೂರ್ತ ಆಕೃತಿಗಳೆಂಬುವೇ ಇಲ್ಲ. ಇರುವುದು-ಸುಳ್ಳುಗಳನ್ನು ಒಪ್ಪನಾಗಿಸುವ ಆಕೃತಿಗಳು ಮಾತ್ರ. ಬದುಕಿನ ಸೌಂದರ್ಯಾತ್ಮಕ ದೃಷ್ಟಿಯನ್ನು ಅವುಗಳ ಮೂಲಕವಾಗಿಯೇ ನಾವು ರೂಪಿಸಿಕೊಳ್ಳುವುದರಿಂದ ನಿಸ್ಸಂಶಯವಾಗಿ ಅವು ನಮ್ಮ ಭೌತಿಕ ಅವಶ್ಯಕತೆಗಳೂ ಆಗಿವೆ.

ಕ್ಯೂಬಿಸಂ-ಬೇರಾವುದೇ ಕಲಾ ಪಂಥಕ್ಕಿಂತ ಬೇರೆಯೇನಲ್ಲ. ಎಲ್ಲದಕ್ಕೂ ಸಾಮಾನ್ಯವಾದ ಅದೇ ಸಿದ್ಧಾಂತ ಮತ್ತು ವಿಚಾರಗಳು ಇರುತ್ತವೆ. ಬಹಳಷ್ಟು ಕಾಲ ಕ್ಯೂಬಿಸಂ ಅರ್ಥವಾಗಲಿಲ್ಲ ಎಂಬುದಾಗಲೀ ಅಥವಾ ಇಂದಿಗೂ ಅದರಲ್ಲಿ ಏನನ್ನೂ ಕಾಣಲಾರದ ಜನರು ಇದ್ದಾರೆ ಎಂಬುದಾಗಲೀ ಶುದ್ಧ ಅರ್ಥಹೀನ. ನಾನು ಇಂಗ್ಲೀಷನ್ನು ಓದುವುದಿಲ್ಲ. ಇಂಗ್ಲೀಷಿನದೊಂದು ಪುಸ್ತಕ ನನ್ನ ಮಟ್ಟಿಗೆ ಒಂದು ಖಾಲಿ ಪುಸ್ತಕ ಮಾತ್ರ. ಅಂದ ಮಾತ್ರಕ್ಕೆ ಇಂಗ್ಲೀಷ್ ಅಸ್ತಿತ್ವದಲ್ಲೇ ಇಲ್ಲ ಎಂದು

ಅರ್ಥ ಅಲ್ಲ. ಅಲ್ಲದೇ ನನಗೇನೋ ಒಂದು ಗೊತ್ತಿಲ್ಲದೆ ಇರುವುದಕ್ಕೆ ನನ್ನನ್ನುಳಿದು ಬೇರೆಯವರನ್ನು ನಿಂದಿಸಲಿಕ್ಕಾಗುವುದಿಲ್ಲ.

ನಾನು ವಿಕಾಸ (evolution) ಪದವನ್ನು ಕೂಡ ಮತ್ತೆ ಮತ್ತೆ ಕೇಳುತ್ತೇನೆ. ಪರ್ಯಾಯವಾಗಿ ನನ್ನ ಚಿತ್ರಕಲೆ ಹೇಗೆ ವಿಕಾಸವಾಯಿತೆಂದು ವಿವರಿಸಲು ಕೇಳಲಾಗುತ್ತದೆ. ನನಗೆ ಕಲೆಯಲ್ಲಿ ಭೂತವಾಗಲೀ, ಭವಿಷ್ಯತ್ತಾಗಲೀ ಕಾಣುವುದಿಲ್ಲ. ಒಂದು ಕಲಾಕೃತಿ ತನ್ನ ವರ್ತಮಾನದಲ್ಲಿ ಸಂಪೂರ್ಣವಾಗಿ ಜೀವಿಸದೇ ಹೋದಲ್ಲಿ ಅದನ್ನು ಗಮನಿಸಲೇಬಾರದು. ಗ್ರೀಕರ ಕಲೆಯಾಗಲೀ ಈಜಿಪ್ಟಿಯನರದಾಗಲೀ, ಬೇರೆ ಬೇರೆ ಕಾಲಗಳಲ್ಲಿ ಜೀವಿಸಿದ್ದ ಯಾವನೇ ಶ್ರೇಷ್ಠ ಕಲಾವಿದನ ಕಲೆಯಾಗಲೀ ಗತಕಾಲದ್ದಾಗುವುದಿಲ್ಲ. ಬಹುಶಃ ಹಿಂದೆಂದೆಗಿಂತ ಇಂದು ಅದು ಹೆಚ್ಚು ಜೀವಂತವಾಗಿರುತ್ತದೆ. ತನಗೆ ತಾನೇ ಕಲೆ ಎಂದೂ ವಿಕಾಸವಾಗುವುದಿಲ್ಲ. ಜನರ ಆಲೋಚನೆಗಳು ಬದಲಿಸುತ್ತಿವೆ ಮತ್ತು ಅದರೊಟ್ಟಿಗೆ ಅವರ ಅಭಿವ್ಯಕ್ತಿಯ ವಿಧಾನಗಳೂ ಬದಲಾಗುತ್ತವೆ. ಒಬ್ಬ ಕಲಾವಿದನ ವಿಕಾಸದ ಬಗೆಗೆ ಜನರು ಮಾತನಾಡುವುದನ್ನು ಕೇಳಿದಾಗ, ಮುಖಾಮುಖಿಯಾಗಿ ನಿಂತು ಪರಸ್ಪರ ಅನಂತವಾಗಿ ಪ್ರತಿಫಲಿಸುತ್ತಿರುವ ಎರಡು ಕನ್ನಡಿಗಳ ನಡುವೆ ಅವನನ್ನು ಕಲ್ಪಿಸಿಕೊಂಡಂತೆ ನನಗೆ ತೋರುತ್ತದೆ. ಒಂದು ಕನ್ನಡಿಯ ಆವರ್ತಿತ ಪ್ರತಿಬಿಂಬಗಳನ್ನು ಭೂತವಾಗಿಯೂ ಮತ್ತೊಂದನ್ನು ಭವಿಷ್ಯತ್ತಾಗಿಯೂ, ನಡುವಿನ ನಿಜ ಬಿಂಬವನ್ನು ವರ್ತಮಾನವನ್ನಾಗಿಯೂ ಕಲ್ಪಿಸುತ್ತಾರೆ. ಅವರಿಗೆ ಅವು ಬೇರೆ ಬೇರೆ ಘಟ್ಟಗಳಲ್ಲಿ ಪ್ರತಿಫಲಿಸುವ ಒಂದೇ ರೂಪವೆಂದು ತಿಳಿಯುವುದಿಲ್ಲ.

ವೈವಿಧ್ಯತೆಗಳು ವಿಕಾಸವೆಂದೇನು ಅರ್ಥವಲ್ಲ. ಒಬ್ಬ ಕಲಾವಿದ ತನ್ನ ಅಭಿವ್ಯಕ್ತಿಯ ರೀತಿಯನ್ನು ಬದಲಿಸಿದ್ದಾನೆಂದರೆ ಅವನು ತನ್ನ ಆಲೋಚನಾ ರೀತಿಯನ್ನು ಬದಲಿಸಿದ್ದಾನೆಂದಷ್ಟೇ ಅರ್ಥ. ಆ ಬದಲಾವಣೆ ಉತ್ತಮಿಕೆ ಆಗಲೂಬಹುದು ಅಥವಾ ಅವನತಿಗೆ ಇಳಿಯಲೂಬಹುದು.

ನಾನು ನನ್ನ ಕಲೆಯಲ್ಲಿ ಬಳಸಿರುವ ಹಲವು ವಿಧಾನಗಳನ್ನು ವಿಕಾಸವೆಂದಾಗಲೀ ಅಥವಾ ಅಪರಿಚಿತ ಆದರ್ಶ ಕಲೆಯೊಂದರ ಕಡೆಗಿನ ಮೆಟ್ಟಿಲುಗಳೆಂದಾಗಲೀ ಪರಿಗಣಿಸಲಾಗದು. ನಾನು ಯಾವಾಗಲೂ ಅವನ್ನು ಪ್ರಸ್ತುತಕ್ಕಾಗಿಯೇ ಮಾಡಿದೆ ಮತ್ತು ಎಂದೆಂದಿಗೂ ಅದು ವರ್ತಮಾನದಲ್ಲಿಯೇ ಉಳಿಯುವ ನಿರೀಕ್ಷೆಯಿಂದಲೇ ಮಾಡಿದ್ದೇನೆ. ನಾನೆಂದೂ ಸಂಶೋಧನಾ ಪ್ರವೃತ್ತಿಯನ್ನು ಪರಿಗಣಿಸಿದವನೇ ಅಲ್ಲ. ನನ್ನ ಅಭಿವ್ಯಕ್ತಿಗಾಗಿ ಏನಾದರೂ ಒಂದು ಸಿಕ್ಕಿತೆಂದರೆ, ಭೂತಭವಿಷ್ಯತ್ತುಗಳ ಚಿಂತೆಯಿಲ್ಲದೆ ಅದನ್ನು ಮಾಡುತ್ತಿದ್ದೆ. ನಾನು ಚಿತ್ರಕಲೆಯಲ್ಲಿ ಬಳಸಿದ ಹಲವು ರೀತಿಗಳು ಪರಸ್ಪರ ತೀವ್ರ ಭಿನ್ನ ಅಂಶಗಳನ್ನು ಹೊಂದಿವೆಯೆಂದು ನಾನು ನಂಬುವುದಿಲ್ಲ. ನಾನು ಅಭಿವ್ಯಕ್ತಿಸಲು ಇಚ್ಛಿಸಿದ ವಸ್ತುಗಳು, ಭಿನ್ನ ಅಭಿವ್ಯಕ್ತಿ ಮಾರ್ಗಗಳನ್ನು ಅಪೇಕ್ಷಿಸಿದಾಗ ಅಂಥವುಗಳನ್ನು ಬಳಸಿಕೊಳ್ಳಲು ನಾನೆಂದೂ ಹಿಂಜರಿದಿಲ್ಲ. ಪ್ರಯೋಗಗಳನ್ನಾಗಲೀ ಪರೀಕ್ಷೆಗಳನ್ನಾಗಲೀ ನಾನೆಂದೂ ಮಾಡಿಲ್ಲ. ನನಗೇನಾದರೂ ಹೇಳಬೇಕಿದ್ದಾಗ ಅದನ್ನು

ಹೇಗೆ ಹೇಳಬೇಕೆಂದು ನನಗೆ ಅನ್ನಿಸಿತ್ತೋ ಹಾಗೇ ಹೇಳಿದ್ದೇನೆ. ಭಿನ್ನ ಉದ್ದಿಶ್ಯಗಳು ಅನಿವಾರ್ಯವಾಗಿ ಭಿನ್ನ ರೀತಿಗಳನ್ನು ಅಭಿವ್ಯಕ್ತಿಗಾಗಿ ಅಪೇಕ್ಷಿಸುತ್ತವೆ. ಇದು ಒಬ್ಬನ ವಿಕಾಸಕ್ಕಾಗಲೀ, ಪ್ರಗತಿಗಾಗಲೀ ಸಂಬಂಧಿಸಿದ್ದಲ್ಲ. ಆದರೆ ಒಬ್ಬ ಅಭಿವ್ಯಕ್ತಿಸ ಲಾಶಿಸುವ ಒಂದು ಸ್ವೀಕೃತ ಸಂಗತಿ ಮತ್ತು ಆ ಸಂಗತಿಯ ಅಭಿವ್ಯಕ್ತ ರೀತಿಯನ್ನು ಹೇಳುತ್ತದೆ.

ಸ್ಥಿತ್ಯಂತರಕಲೆ ಅಸ್ತಿತ್ವದಲ್ಲೇ ಇಲ್ಲ. ಕಲೆ ಇತಿಹಾಸದ ಅನುಕ್ರಮಣಿಕೆಯಲ್ಲಿ ಬೇರೆಯವಕ್ಕಿಂತ ಹೆಚ್ಚು ಖಚಿತವಾದ, ಪೂರ್ಣವಾದ ಕೆಲವು ಘಟ್ಟಗಳು ಇದ್ದಿರ ಬಹುದು. ಇದರರ್ಥ ಬೇರೆಯವಕ್ಕಿಂತ ಶ್ರೇಷ್ಠವಾದ ಕಲಾವಿದರು ಆ ಕಾಲದಲ್ಲಿದ್ದ ರೆಂದು ಆಗುತ್ತದೆ. ದಾದಿ ತನ್ನ ರೋಗಿಯ ಜ್ವರವನ್ನಳೆಯಲು ಬಳಸಿದಂತೆ ಗ್ರಾಫ್ ಒಂದನ್ನು ಕಲೆಯ ಇತಿಹಾಸ ಪ್ರತಿಬಿಂಬಿಸಲು ಬಳಸಿದ್ದೇ ಆದರೆ–ಕಲೆಯಲ್ಲಿ ಊರ್ಧ್ವಗಾಮಿ ಪ್ರಗತಿ ಮಾತ್ರವೇ ಇರದೆ ಏರಿಕೆ ಇಳಿಕೆಗಳು ಉಂಟಾಗಬಹುದೆಂಬುದನ್ನು ಸಮರ್ಥಿಸು ವಂತೆ–ಅದೇ ಏರು ಜಾರುಗಳೇ ಇಲ್ಲಿಯೂ ಕಾಣಬಹುದು. ಇದೇ ಸ್ಥಿತಿ ಒಬ್ಬನೇ ಕಲಾವಿದನ ಕೃತಿಗಳಲ್ಲಿಯೂ ಕಾಣಬಹುದು.

'ಕ್ಯೂಬಿಸಂ' ಅನ್ನು ಕಲೆಯ ಸ್ಥಿತ್ಯಂತರವೆಂದು, ನಿರ್ಣೀತ ಪರಿಣಾಮಗಳನ್ನು ನೀಡಬೇಕಾದ ಪ್ರಯೋಗವೆಂದು ಬಹಳ ಜನ ಭಾವಿಸಿದ್ದಾರೆ. ಹೀಗೆ ಆಲೋಚಿಸುವ ವರಿಗೆ ಅದು ಏನೆಂಬುದೂ ಅರ್ಥವಾಗಿರಲಾರದು. 'ಕ್ಯೂಬಿಸಂ' ಎಂಬುದು ಒಂದು ಬಿತ್ತವೂ ಅಲ್ಲ ಭ್ರೂಣವೂ ಅಲ್ಲ, ಬದಲಿಗೆ ಮೂಲಭೂತವಾಗಿ ಆಕೃತಿಗಳೊಂದಿಗೆ ವ್ಯವಹರಿಸುವ ಒಂದು ಕಲೆ ಮಾತ್ರ. ಮತ್ತು ಅದು ತನ್ನದೊಂದು ರೂಪವನ್ನು ಸಾಧಿಸಿಕೊಂಡ ಮೇಲೆ ತನ್ನ ಬದುಕನ್ನು ತಾನೇ ಬದುಕಿಕೊಳ್ಳುತ್ತದೆ. ಒಂದು ಜ್ಯಾಮಿತಿಯ ಆಕೃತಿ ಹೊಂದಿರುವ ಖನಿಜ ದ್ರವ್ಯ ಸ್ಥಿತ್ಯಂತರದ ಉದ್ದಿಶ್ಯಕ್ಕೆಂದು ಮಾಡಿದ್ದಲ್ಲ. ಅದು ತಾನು ಏನಾಗಿದೆಯೋ ಅದೇ ಆಗಿದ್ದು ಸದಾ ತನ್ನದೇ ಆಕೃತಿ ಯನ್ನು ಪಡೆದಿರಬೇಕಾಗುತ್ತದೆ. ಸ್ಥಿತ್ಯಂತರ ಮತ್ತು ವಿಕಾಸಗಳ ನಿಯಮಗಳನ್ನು ಕಲೆಗೆ ಅನ್ವಯಿಸಿದ್ದೇ ಆದರೆ ಎಲ್ಲ ಕಲೆಯೂ ಸ್ಥಿತ್ಯಂತರವೆಂದೇ ಒಪ್ಪಿಕೊಳ್ಳಬೇಕಾ ಗುತ್ತದೆ. ಇದಕ್ಕೆ ಬದಲಾಗಿ ಕಲೆ ಇಂಥ ಯಾವುದೇ ತಾತ್ವಿಕ ಪ್ರಮೇಯಗಳಿಗೂ ಒಳಗಾಗುವುದಿಲ್ಲ. 'ಕ್ಯೂಬಿಸಂ' ಕಲಾ ಜೀವನದ ಒಂದು ಸ್ಥಿತ್ಯಂತರವೇ ಆಗಿದ್ದರೆ ಅದರಿಂದ ಬರುವಂಥದ್ದು ಮತ್ತೊಂದು ರೀತಿಯ 'ಕ್ಯೂಬಿಸಂ' ಮಾತ್ರವೇ ಎಂದು ನನಗೆ ಖಚಿತವಾಗಿದೆ.

ಗಣಿತ, ಜ್ಯಾಮಿತಿ, ರಸಾಯನಶಾಸ್ತ್ರ, ಮನೋ ವಿಶ್ಲೇಷಣೆ, ಸಂಗೀತ ಮತ್ತೇನೇ ಇರಲಿ, ಕ್ಯೂಬಿಸಂಗೆ ಸಂಬಂಧಿಸಿರುವುದು ಅದಕ್ಕೆ ಸುಲಭ ಅರ್ಥವಂತಿಕೆ ಯನ್ನು ನೀಡುವುದಕ್ಕಾಗಿ. ಇವೆಲ್ಲವೂ ಶುದ್ಧ ಸಾಹಿತ್ಯ ಪರಿಕರಗಳು. ಕೆಟ್ಟ ಪರಿಣಾಮ ಬೀರಿ ಜನರನ್ನು ಸಿದ್ಧಾಂತಗಳಿಂದ ಕುರುಡಾಗಿಸುವ ಕಗ್ಗ ಅಲ್ಲ.

ಕ್ಯೂಬಿಸಂ ತನ್ನ ಮಿತಿಯಲ್ಲಿ ತಾನಿದ್ದು ಚಿತ್ರ ಕಲೆಯ ಸೀಮೆಯಲ್ಲೇ ಉಳಿದಿದೆ,

ಆದರಾಚೆ ಹಾಯುವಂತೆ ಎಂದೂ ವರ್ತಿಸಿಲ್ಲ. ರೇಖೆ, ವಿನ್ಯಾಸ ಮತ್ತು ವರ್ಣಗಳ ಗ್ರಹಿಕೆ ಹಾಗೂ ಬಳಕೆಗಳು ಬೇರೆಲ್ಲಾ ಸಂಪ್ರದಾಯಗಳಲ್ಲಿ ಗ್ರಾಹ್ಯವಾಗಿರುವಂತೆಯೇ, ಬಳಕೆಯಾಗುವಂತೆಯೇ ಇವೆ. ಹಿಂದೆ ನಿರ್ಲಕ್ಷಿಸಲ್ಪಟ್ಟಿದ್ದ ಚಿತ್ರಕ ಸಾಮಗ್ರಿಗಳು ಮತ್ತು ಆಕೃತಿಗಳು ನಮಗೆ ಪರಿಚಿತವಾದಂತೆಲ್ಲಾ ನಮ್ಮ ಉದ್ದಿಶ್ಯಗಳು ಬೇರೆಯಾಗುತ್ತಿರಬಹುದು. ಸುತ್ತಲಿನ ಪರಿಸರಕ್ಕೆ ನಾವು ನಮ್ಮ ಕಣ್ಣುಗಳನ್ನ–ಮತ್ತು ಬುದ್ಧಿಯನ್ನು ಕೂಡ ತೆರೆದಿಟ್ಟಿದ್ದೇವೆ.

ನಾವು ಕಾಣುವಷ್ಟು ದೂರ ನಮ್ಮ ವಸ್ತುಗಳಲ್ಲಿ ಆವುಗಳ ಬಣ್ಣ ಮತ್ತು ರೂಪುಗಳಿಗೆ ವೈಯಕ್ತಿಕ ಪ್ರಾಶಸ್ತ್ಯವನ್ನು ನಾವು ಕೊಡುತ್ತೇವೆ. ನಮ್ಮ ವಸ್ತುವೇ ಆಸಕ್ತಿಯ ಮೂಲವಾಗಿರವಂತೆ, ಅನ್ವೇಷಣದ ಆನುದವನ್ನ ನಿರೀಕ್ಷಿತತೆಯ ರೋಚಕತೆಯನ್ನು ಉಳಿಸಿಕೊಳ್ಳುತ್ತೇವೆ. ಆದರೆ ನೋಡಬಯುಸುವ ಪ್ರತಿಯೊಬ್ಬನೂ ನೋಡಬಹುದಾಗಿರುವಾಗ ನಾವು ಏನು ಮಾಡುತ್ತೇವೆಂಬುದನ್ನು ಹೇಳಿಕೊಳ್ಳುವುದರಲ್ಲಿರುವ ಪ್ರಯೋಜನವಾದರೂ ಏನು ?

ಅನುಭವಕ್ಕೆ ತಿಳಿಯಾದ, ಹರವಾದ, ಸ್ಥಿರವಾದ ಎಚ್ಚರವೇ ಬೇಕು. ಅದಷ್ಟೆ ಸಾಕು. ಅನುಭಾವಕ್ಕೆ ಇದೇ ಜಾತಿಯ ಎಚ್ಚರವೇ ಬೇಕು; ಆದರೆ ಅದು ಕನಸಿನಾಚೆಯ ನಿದ್ದೆಯಲ್ಲ. ನಿದ್ದೆಯಾಚೆಗಿನ ಎಚ್ಚರ. ನಿದ್ದೆಯ ಆಚೆಗೊಂದು ಎಚ್ಚರದ ಹಿಮಾಲಯವಿದೆ. ಆದರ ಎತ್ತರದಿಂದ ಬಹಳ ವಿಸ್ತಾರವಾದ ದೃಶ್ಯವು ಗೋಚರವಾಗುವುದು. ಈ ಎತ್ತರದ ಮೇಲಿನ ಎಚ್ಚರಕ್ಕೆ 'ಸಮಾಧಿ' ಎಂದು ಹೇಳುವರು. ಪರತತ್ತ್ವವು ಅತೀಂದ್ರಿಯವೆಂಬ ಜ್ಞಾನಿಗಳು ಹೇಳಿದ್ದಾರೆ. ಆದರೆ 'ರಸೋ ವೈ ಸಃ' 'ಬ್ರಹ್ಮ ಸಂಸ್ಪರ್ಶಮಶ್ನುತೇ' ಅದು ಓಂಕಾರ ಸ್ವರೂಪವು, ಅದು ಪ್ರಾಣ, ಸಾಕ್ಷಿಯಿಂದ ಅದು ಅರಿಯಲಾಗದು ಇತ್ಯಾದಿಯಾಗಿ ಹೇಳುವಾಗ ಇಂದ್ರಿಯದ ಭಾಷೆಯ ಅಲಂಕಾರವನ್ನು ಮಾಡಿದ್ದಾರೆ ಎಂದು ಹೇಳಲು ಬರದು. ಸಮಾಧಿಯಲ್ಲಿಯೂ ಅದರದೊಂದು ಸುಷುಪ್ತಿಯಿದೆ ಎಂದು ಬೇಕಾದರೆ ಒಪ್ಪಿಕೊಳ್ಳೋಣ. ಆದರೆ 'ಸಮಾಧಿ'ಯ ಎಚ್ಚರವು ಇಂದ್ರಿಯ ಸದೃಶ ಅನುಭವವುಳ್ಳದ್ದಾಗಿದೆ.

ದ. ರಾ. ಬೇಂದ್ರೆ
(ವಿಚಾರ ಮಂಜರಿ)

ಉತ್ತರ ಕರ್ನಾಟಕದ ರಂಗಭೂಮಿ

(ಸಿಂಹಾವಲೋಕನ)

ಮುದವೀಡು ಕೃಷ್ಣರಾಯರು

ಸಿಂಗರಾರ್ಯನ ಮಿತ್ರವಿಂದಾಗೋವಿಂದ ನಾಟಕವೇ ಇಂದಿಗೆ ಕನ್ನಡ ವಾಙ್ಮಯದಲ್ಲಿ ಉಪಲಬ್ಧವಾದ ಮೊದಲನೆಯ ನಾಟಕವಾಗಿದೆ. ಆದರ ತರುವಾಯದಲ್ಲಿ ಹುಟ್ಟಿದ ನಾಟಕವೆಂದರೆ ಚುರಮುರಿಯವರ ಶಾಕುಂತಲವೇ. ಇತ್ತಿತ್ತಲಾಗಿ ಅನೇಕಾನೇಕ ನಾಟಕಗಳು ನಮ್ಮ ನಾಡಿನಲ್ಲಿ ಹುಟ್ಟಿ ಬೆಳಕಿಗೆ ಬರಹತ್ತಿವೆ. ಚುರಮುರೀ ಶೇಷಗಿರಿರಾಯರೇ ಭಾಷಾಂತರಿಸಿದ ಶೂದ್ರಕನ ಮೃಚ್ಛಕಟಿಕದ ಮುದ್ರಿತವಾದ ಪ್ರತಿಯು ಈಗೀಗ ಉಪಲಬ್ಧವಾಗಿದೆ. ಸ್ವ. ವಾ. ಧೊಂಡೋ ನರಸಿಂಹ ಮುಳಬಾಗಿಲರವರು ಮೃಚ್ಛಕಟಿಕ, ಉತ್ತರರಾಮಚರಿತ, ಮಾಲವಿಕಾಗ್ನಿಮಿತ್ರ ನಾಟಕಗಳನ್ನು ಭಾಷಾಂತರಿಸಿ ಪ್ರಕಟಿಸಿದ್ದಾರೆ. ಗರಣೀ ಕೃಷ್ಣಾಚಾರ್ಯರ ಮೃಚ್ಛಕಟಿಕವೂ, ಮೈಸೂರಿನ ಕೈ. ವಾ. ಬಸವಪ್ಪಶಾಸ್ತ್ರಿಗಳವರು ದಿವಂಗತ ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀ ಚಾಮರಾಜ ಒಡೆಯರ ಪ್ರೇರಣೆಯಿಂದ ಭಾಷಾಂತರಿಸಿದ ಶಾಕುಂತಲವೂ ಪ್ರಸಿದ್ಧವಾಗಿವೆ. ಮೈಸೂರಿನ ಗ್ರ್ಯಾಜುಯೇಟ್ಸ್ ಟ್ರೇನಿಂಗ್ ಆಸೋಶಿಯೇಶನದವರು ಶೇಕ್ಸ್‌ಪಿಯರನ ಅನೇಕ ನಾಟಕಗಳನ್ನು ಕನ್ನಡದಲ್ಲಿ ಬರೆಯಿಸಿ ಪ್ರಕಟಿಸಿದ್ದಾರೆ. ಸ್ವ. ವಾ. ಶಾಂತ ಕವಿಗಳ ನಾಟಕಗಳಂತೂ ಎಲ್ಲರಿಗೂ ಪರಿಚಿತವಾಗಿವೆ. ಇತ್ತಿತ್ತಲಾಗಂತೂ ನಮ್ಮ ಕನ್ನಡ ನಾಡಿನಲ್ಲೆಲ್ಲ ಕಡೆಗೆ ನಾಟಕಕಾರರು ಉದಯ ಹೊಂದಿ ನಾಟಕ ಗ್ರಂಥಗಳನ್ನು ವಿಪುಲವಾಗಿ ನಿರ್ಮಿಸಹತ್ತಿದ್ದಾರೆ.

ಯಕ್ಷಗಾನ, ಭಾಗವತರಾಟ, ಬೈಲಾಟ, ಗೊಂಬೆಯಾಟ ಮೊದಲಾದವುಗಳು ನಮ್ಮ ನಾಡಿನಲ್ಲಿ ಬಹು ಪುರಾತನ ಕಾಲದಿಂದಲೂ ಪ್ರಚಲಿತವಾಗಿರುವವೆಂಬುದು ತಮಗೆಲ್ಲ ವಿದಿತವಾಗಿಯೇ ಇದೆ. ಇವುಗಳಲ್ಲಿ ನಾಟ್ಯಕಲೆಯ ಅಂಗೋಪಾಂಗಗಳಾದ ಗಾಯನ, ನರ್ತನ, ಅಭಿನಯ, ಅಂಗವಿಕ್ಷೇಪಾದಿಗಳು ಅತ್ಯಂತ ಹೃದಯಂಗಮವಾದ ರೀತಿಯಲ್ಲಿ ಪ್ರದರ್ಶಿತವಾಗುತ್ತಿರುವವೆಂಬುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ವರೆಗೂ ಪ್ರತೀತವಾಗುತ್ತಿರುವುದು. ಇತ್ತಿತ್ತಲಾಗಿ ಈ ನಮ್ಮ ನಾಟ್ಯ ಪ್ರಯೋಗ ಭಾಗವು ಕುಗ್ಗುತ್ತ ನಡೆದ ಲಕ್ಷಣಗಳು ತೋರಹತ್ತಿರಲು ಉಡುಪಿಯ ಸ್ವರ್ಗಸ್ಥ

* ಜಯಕರ್ನಾಟಕ. ಸಂಪುಟ 12, ಸಂಚಿಕೆ 11, ಪು. 27 ರಿಂದ 34, 1934.

ಶ್ರೀ ಕರೋಡೀ ಸುಬ್ಬರಾಯರಂಥ ಮಹನೀಯರು ಇದರ ಪುನರುಜ್ಜೀವನಕಾರ್ಯಕ್ಕೆ ಕೈಯಿಕ್ಕಿದರು. ಇವರು ದಿವಂಗತರಾದ ಅನಂತರ ಇದೇ ಕಾರ್ಯವನ್ನು ಮಂಗಳೂರಿನ ಕರ್ನಾಟಕ ಸಭೆಯವರು ಕೈಕೊಂಡು ಮುಂದುವರಿಸಿದ್ದಾರೆ. ನಮ್ಮ ಹಳ್ಳಿಗಾಡ ಜನಾಂಗಭಾಗದಲ್ಲಿ ನಮ್ಮ ಪುರಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕೂ ಅರ್ವಾಚೀನ ಸಂಸ್ಕೃತಿಯ ವಿಚಾರಗಳನ್ನು ಹರಡುವದಕ್ಕೂ ಅತ್ಯಂತ ಸುಲಭವೂ ಶೀಘ್ರ ಪರಿಣಾಮಕಾರಿಯೂ ಆದ ಈ ಸಾಧನಗಳನ್ನು ಅಲ್ಲಲ್ಲಿಯ ಸುಶಿಕ್ಷಿತ ವಾಙ್ಮಯ ಭಕ್ತರು ಕೈಯಲ್ಲಿ ತೆಗೆದುಕೊಂಡು ಇವುಗಳ ಪುನರುಜ್ಜೀವನವಾಗುವಂತೆ ಪ್ರಯತ್ನಿಸುವ ಮಾರ್ಗಗಳನ್ನು ತಾವು ನಿಷ್ಕರ್ಷಿಸಬೇಕಾಗಿದೆ.

ಗೊಂಬೆಯ ಆಟಗಳು ನಮ್ಮ ನಾಡಿನ ಅತಿಪುರಾತನ ಸಂಸ್ಥೆಗಳು. ಇವುಗಳಲ್ಲಿ ಲ್ಲಿಯೂ ನಾಟ್ಯ ಕಲಾಕೌಶಲ್ಯವು ಅಪ್ರತಿಮವಾಗಿ ವ್ಯಕ್ತವಾಗುತ್ತಿತ್ತು. ಯಕ್ಷಗಾನ ಭಾಗವತರ ಆಟಗಳಲ್ಲಿ ಮನುಷ್ಯರು ಯಾವ ಯಾವ ಭಾವಭಂಗಿಗಳನ್ನೂ, ಪದನ್ಯಾಸ ಕರನ್ಯಾಸಾದಿ ಅಂಗವಿಕ್ಷೇಪಗಳನ್ನೂ ಪ್ರದರ್ಶಿಸುತ್ತಿದ್ದರೊ ಅವುಗಳೆಲ್ಲ ಗೊಂಬೆಗಳಿಂದಲೂ ಅಭಿವ್ಯಕ್ತವಾಗುವಂತೆ ಅತೀವ ಕೌಶಲ್ಯದಿಂದ ಈ ಆಟಗಳನ್ನು ಆಡಿಸುತ್ತಿದ್ದರು. ಸುಮಾರು 40 ವರ್ಷ ಹಿಂದಿನವರೆಗೆ ಈ ಆಟಗಳು ನಮ್ಮ ನಾಡಿನಲ್ಲೆಲ್ಲ ಕಡೆಗೆ ಪ್ರಚಾರದಲ್ಲಿದ್ದವು. ಬಿಸಾವಿಯತ್ತ ಕಡೆಯ ಗೊಂಬೀ ಅನಂತಪ್ಪನವರ ಕೃಷ್ಣ ಪಾರಿಜಾತ ಆಟವನ್ನು ನಾನು ಚಿಕ್ಕಂದಿನಲ್ಲಿ ನೋಡಿದ್ದು. ನನ್ನ ಸ್ಮರಣದಲ್ಲಿದೆ. ಈ ಆಟದಲ್ಲಿ ಹೊರಬೀಳುತ್ತಿದ್ದ ಇವರ ಕೌಶಲ್ಯದ ಮೂಲಕವಾಗಿಯೇ ಇವರಿಗೆ "ಗೊಂಬೆ" ಎಂಬ ಅಡ್ಡ ಹೆಸರು ಬಂದಿದೆ. ಇದು ಇನ್ನೂವರೆಗೆ ಇವರ ಮನೆತನಕ್ಕೆ ನಡೆದೇ ಇರುತ್ತದೆ. ನಿರ್ಜೀವವಾದ ಕಟ್ಟಿಗೆಯ ಗೊಂಬೆಗಳಿಂದ ಅನಂತಪ್ಪನವರು ಮಾಡಿಸುತ್ತಿದ್ದ ಅಂಗವಿಕ್ಷೇಪಗಳೂ ನಾಟ್ಯದೊಳಗಿನ ಪದನ್ಯಾಸ ಕರನ್ಯಾಸಗಳೂ ಈಗಿನ ಕಾಲದ ಸಜೀವ ನಟನಟಿಯರಲ್ಲಿ ಕಂಡು ಬರುವದೂ ದುರ್ಲಭವಾಗಿದೆ. ಸತ್ಯಭಾಮೆಯ ಗೊಂಬೆಯನ್ನು ಅನಂತಪ್ಪನವರು ತಮ್ಮ ಕೈಯಿಂದಲೇ ಕೆತ್ತಿಕೊಂಡು ಸೂತ್ರಗಳನ್ನು ಜೋಡಿಸಿ ಬಣ್ಣಕೊಟ್ಟು ಸಿದ್ಧಪಡಿಸಿಕೊಂಡಿದ್ದರೆಂಬುದು ನನ್ನ ಕೇಳಿಕೆಯ ಮಾತು. ಅಪರಾಳ ತಮ್ಮಣ್ಣನ ಕೃಷ್ಣಪಾರಿಜಾತಾಖ್ಯಾನದಲ್ಲಿ ಅನಂತಪ್ಪನವರು ಸತ್ಯಭಾಮೆಯ ಗೊಂಬೆಯನ್ನು ರಂಗಭೂಮಿಯ ಮೇಲೆ ತಂದು "ಕ್ಷೀರಸಾಗರ ತನಯುಮನೆ" ಎಂಬ ಪದವನ್ನು ಹಾಡುತ್ತ ನಾಟ್ಯಕ್ಕೆ ಪ್ರಾರಂಭಮಾಡಿದ ಕೂಡಲೆ ಹತ್ತೆಂಟು ಸಾವಿರ ನೋಟಕರ ಗುಂಪೆಲ್ಲ ಚಿತ್ರ ಬರೆದ ಗೊಂಬೆಗಳಂತೆ ನಿಶ್ಚಲ ಚಿತ್ತವಾಗಿ ಮೈಮರೆತು ಕುಳಿತು ಕೇಳಿ ನೋಡುತ್ತಿರುವ ನೋಟವು ಇನ್ನೂ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ. ವಿರಹಿಣಿಯಾದ ಸತ್ಯಭಾಮೆಯು ಶೋಕ ಭಾರಪೀಡಿತಳಾಗಿ ತನ್ನ ಶೃಂಗಾರದೊಡವೆಗಳನ್ನೆಲ್ಲ ತೆಗೆತೆಗೆದು ಎಸೆಯುವಾಗ ಅನಂತಪ್ಪನವರ ನಿರ್ಜೀವ ಗೊಂಬೆಯು ತನ್ನ ಮೂಗಿನೊಳಗಿನ ನತ್ತು ತೆಗೆದು ಬಿಸುಟುತ್ತಿದ್ದುದನ್ನು ನಾನು ಕಣ್ಣುಬಿಟ್ಟು ಕಂಡಿದ್ದೇನೆ. ತನ್ನನ್ನು ಆ ಬಗೆಯ ದುರದೃಷ್ಟವಂತೆಯಾಗಿ ಹುಟ್ಟಿಸಿದ ಬ್ರಹ್ಮದೇವನನ್ನು

"ಅವನ ಪಟ್ಟದ ರಾಣಿ ಅವನಿಯೊಳು ತಿರಿತಿನಲಿ; ಅವನ ಪಟ್ಟಕ್ಕೆ ಮುಂದೆ ಹನುಮ ಬರಲಿ" ಎಂದು ದುಃಖಕ್ರಾಂತೆಯಾಗಿ ಶಪಿಸುತ್ತ ಕೈ ಚಿಟುಕು ಮುರಿಯುತ್ತಿದ್ದುದನ್ನು ಕಂಡು ನೋಟಕರ ಕಣ್ಣೊಳಗಿಂದ ಪಟಪಟನೆ ಕಣ್ಣೀರ ಹನಿಗಳು ಉದುರುತ್ತಿದ್ದುದನ್ನು ನಾನು ಎಂದೂ ಮರೆಯುವಂತಿಲ್ಲ. ಪ್ರಿಯ ರಸಿಕ ಬಾಂಧವರೇ, ಕನ್ನಡಿಗರಿಗೆ ವಿಶಿಷ್ಟ ಸೊತ್ತಿನದಾದ ಈ ಕಲಾಪ್ರಾವೀಣ್ಯವು ನಿಮಗಿನ್ನೆಲ್ಲಿ ಹುಡುಕಿದರೆ ಸಿಕ್ಕೀತು? ಕಾಷ್ಟ ಲೋಷ್ಟಗಳಿಂದ ನಿರ್ಮಿತವಾದ ನಿರ್ಜೀವ ಪ್ರತಿಮೆಗಳಿಂದ ಈ ಬಗೆಯ ನಾಟ್ಯ ಕೌಶಲ್ಯ ವನ್ನು ಹೊರಗೆಡಹಲು ಸಮರ್ಥರಾದ ಗೊಂಬೀ ಅಸಂತಪ್ಪನವರ ಮನೆಯಲ್ಲಿ ನಾಟ್ಯ ಕಲೆಯ ಅಧಿದೇವತೆಗಳಾದ ಗಣಪತಿ ಗಂಧರ್ವರೂ ನೀರು ಹೊತ್ತಂತಲ್ಲವೆ? ಅಂಥ ಸ್ವರ್ಗೀಯ ಕಲೆಯು ಈಗ ಎಲ್ಲಿ ಅಡಗಿದೆಂಬುದನ್ನು ನಾವು ಕನ್ನಡಿಗರು ವಿಚಾರಿಸಿ ನೋಡಬೇಡವೆ? ಅದನ್ನು ಪುನಶ್ಚ ಸಂಪಾದಿಸಲು ಮಾಡಬೇಕಾದ ಸಾಹಸವನ್ನು ನಾವು ಮಾಡಬೇಡವೇ?

ಗೊಂಬೆಯ ಆಟಗಳ ತರುವಾಯದಲ್ಲಿ ನಾವು ನಾಟಕಗಳ ಸೀಮೆಯನ್ನೇ ನಿರೀಕ್ಷಿಸಬೇಕಾಗಿದೆ. ಕನ್ನಡ ನಾಡಿನ ಈ ಭಾಗದಲ್ಲಿ ಹುಟ್ಟಿದ ಮೊದಲನೆಯ ನಾಟಕ ಮಂಡಳಿಯೆಂದರೆ ಬೆಳಗಾಂವಿ ಜಿಲ್ಲೆಯೊಳಗಿನ ಹಲಸಿಗಿ ಗ್ರಾಮದ್ದು. ಹಲಸಿಗೆಯು ಕ್ರಿ. ಶ. 10–11ನೇ ಶತಮಾನಗಳಲ್ಲಿ ಕದಂಬ ರಾಜರ ರಾಜಧಾನಿಯಾಗಿತ್ತೆಂದು ಇತಿಹಾಸ ಬಲ್ಲವರು ಹೇಳುತ್ತಾರೆ. ರಾಜಧಾನಿಗಳೇ ಲಲಿತ ಕಲೆಗಳಿಗೆ ಆಗರವಾಗಿರು ವದು ಸ್ವಾಭಾವಿಕವು. ಏಳೆಂಟು ಶತಮಾನಗಳ ತರುವಾಯದಲ್ಲಾದರೂ ಅದೇ ಪುಣ್ಯಬಲದಿಂದ ನಾಟ್ಯ ಕಲೆಯ ಉಪಾಸನೆ ಮಾಡುವ ಭಕ್ತಮಂಡಲಿಯು ಹಲಸಿಗೆ ಯಲ್ಲಿ ಹುಟ್ಟಿತೆಂದು ಹೇಳಬಹುದೇ ಹೇಗೆಂಬುದನ್ನು ತಾವು ವಿಚಾರಿಸಿ ನೋಡಬಹುದು. ಸುಮಾರು 60 ವರ್ಷಗಳ ಹಿಂದೆ ಹುಟ್ಟಿದ ಈ ನಾಟಕ ಮಂಡಲಿಯೊಳಗಿನ ನಟವರ್ಗವು ಈ ನಡುಗಾಲದ ನಾಟಕ ಮಂಡಲಿಗಳೊಳಗಿನ ಮುತ್ಸಾಳ ಪೋರರಂತೆ ವಿದ್ಯಾಚಾರ ವಿರಹಿತ ಧರ್ಮಲಂಡ ನೀತಿಭ್ರಷ್ಟ ಪುಂಡ ಪೋಕರರಗಳಾಗಿದ್ದಿಲ್ಲ; ವೇದಶಾಸ್ತ್ರ ಪುರಾಣ ಗ್ರಂಥಗಳನ್ನು ಅಧ್ಯಯನ ಮಾಡಿ ಸಂಸ್ಕೃತಮನಸ್ಕರೂ ಸದಾಚಾರ ಸಂಪನ್ನಸಚ್ಛೀಲ ವೈದಿಕವೃತ್ತಿಯ ಯಥಾರ್ಥ ಬ್ರಾಹ್ಮಣರಾಗಿದ್ದರು. ಈ ಮಂಡಲಿಯವರು ಬೆಳಗಾವಿ ಯಿಂದ ಬಳ್ಳಾರಿಯವರೆಗಿನ ಕನ್ನಡ ನಾಡಿನಲ್ಲೆಲ್ಲ ಸಂಚಾರಮಾಡಿ ಬಂದದ್ದನ್ನು ಬಲ್ಲ ವರು ಹೇಳುತ್ತಾರೆ. ಶ್ರೀಮತಿಪರಿಣಯ, ಮದಲಸಾ ಪರಿಣಯ, ದ್ರೌಪದೀ ವಸ್ತ್ರ ಹರಣ, ಭೌಮಾಸುರ ವಧೆ, ಮೊದಲಾದ ನಾಟಕಗಳನ್ನು ಇವರು ಆಡುತ್ತಿದ್ದರು. ಈ ನಾಟಕಗಳನ್ನು ಶ್ರೀನಿವಾಸ ಕವಿಗಳು (ವೆಂಕಣ್ಣಾಚಾರ್ಯ ಆಗಳಗಟ್ಟಿ ಎಂಬುವರು) ಬರೆದುಕೊಡುತ್ತಿದ್ದರು. ಇವುಗಳೊಳಗಿನ ಭೌಮಾಸುರ ವಧೆ ನಾಟಕದ ಕೈಬರಹದ ಪ್ರತಿಯು ಇಂದಿನ ನಾಟ್ಯ ಗ್ರಂಥಗಳ ಪ್ರದರ್ಶನದಲ್ಲಿ ಮಂಡಿಸಲಾಗಿದೆ. ನಾಟಕ ವ್ಯವಸಾಯದಲ್ಲಿ ತೊಡಗಿದ್ದರೂ ಈ ನಟವರ್ಗದ ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮ ಗಳಿಗೆ ಎಂದೂ ಲೋಪಬರುತ್ತಿದ್ದಿಲ್ಲ. ಇವರು ಸಂಚಾರಕ್ಕೆ ಹೊರಟಾಗ್ಗೆ ಹೋದ

ಊರುಗಳ ಗುಡಿಗಳಲ್ಲಿ ಭಾರತ ಭಾಗವತ ರಾಮಾಯಣ ಹರಿವಂಶಾದಿ ಪುರಾಣ ಹೇಳುತ್ತಿದ್ದರೆಂದೂ ಪ್ರಖ್ಯಾತಿಯುಂಟು. ಸಮಗ್ರ ಭಾಗವತ ಸಪ್ತಾಹಗಳನ್ನೂ ಕೆಲವರು ಮಾಡುತ್ತಿದ್ದರೆಂದೂ ಕೆಲವರು ಹೇಳುತ್ತಾರೆ. ನಾಟಕೋಪಜೀವಿಗಳು ತಮ್ಮ ಧಾರ್ಮಿಕ ಆಚರಣೆಗಳನ್ನೂ ನೀತಿ ನಿರ್ಬಂಧಗಳನ್ನೂ ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಯಾವ ತೊಂದರೆಯೂ ಇಲ್ಲವೆಂಬುದು ಇದರಿಂದ ಸ್ಫುಟವಾಗುತ್ತದೆ. ಈ ಮಂಡಳಿಯ ಎರಡನೆಯಾವೃತ್ತಿಯಾದ ಮತ್ತೊಂದು ಹಲಸಿಗೆಯ ನಾಟಕ ಮಂಡಳಿಯು ಬಹು ದಿವಸ ಬಾಳಿ ಇಡೀ ಉತ್ತರ ಕನ್ನಡ ನಾಡನ್ನೆಲ್ಲ ಸಂಚರಿಸಬೇಕೆಂದು ನನಗೆ ತೋರುತ್ತದೆ. 1882ರ ಸುಮಾರಕ್ಕೆ ಶಿರ್ಶಿಯಲ್ಲಿ ಇದರ ವಿರಾಟಪರ್ವ ನಾಟಕ ವನ್ನು ನೋಡಿದ್ದು ನನ್ನ ನೆನಪಿಗೆ ಬರುತ್ತದೆ. ಆಗ ಸಂಡಿಗಿ, ಮಂಡಿಗಿ ಎಂಬ ಅಡ್ಡ ಹೆಸರಿನವರಿಬ್ಬರು ಇದರಲ್ಲಿ ಸ್ತ್ರೀಪಾತ್ರಾಭಿನಯದಲ್ಲಿ ಬಹಳವಾಗಿ ಹೊಂದಿದ್ದರು. ಹೆಸರು ಇವರೊಳಗಿನ ಮಂಡಿಗಿ ಎಂಬುವರು ಇನ್ನೂ ಬೆಳಗಾವಿಯಲ್ಲಿದ್ದಾರೆ. ವಿರಾಟಪರ್ವ ನಾಟಕದಲ್ಲಿ ಸೈರಂಧ್ರಿಯ ಪಾತ್ರವನ್ನು ಧರಿಸಿದವರು ರಂಗಭೂಮಿಯಲ್ಲಿ ತಮಗೆ ಕೆಲಸವಿಲ್ಲದಾಗ ಹೊರಗಿನಿಂದ ಲಾಂದರು ಹಿಡಿಸಿಕೊಂಡು ಬಂದು ಪ್ರೇಕ್ಷಕ ಹೆಂಗಸರ ಗುಂಪಿನಲ್ಲಿ ಅರ್ಧ ಗಂಟೆಯವರೆಗೆ ಕುಳಿತು ಹೋದರೂ ಯಾರೂ ಗುರುತಿಸಲಿಲ್ಲವೆಂಬ ವರ್ತಮಾನವು ಮರುದಿವಸ ಊರಲ್ಲೆಲ್ಲ ಹಬ್ಬಿತು. ಇದೊಂದೆ ಸಂಗತಿಯಿಂದ ನಾಟಕ ಮಂಡಳಿಯ ನಟರ ತಾದಾತ್ಮ್ಯಭಾವವೂ ಅಭಿನಯ ನೈಪುಣ್ಯವೂ ಒಡೆದು ಕಾಣುವಂತಿದೆ.

ಆ ಕಾಲದ ಎರಡನೆಯ ನಾಟಕ ಮಂಡಳಿಯೆಂದರೆ ಗದಗಿನದು. ಇವರೂ ನಾಟ್ಯ ಕಲೆಯ ಅಂಗೋಪಾಂಗಗಳಲ್ಲಿ ಒಳ್ಳೇ ಪ್ರಸಿದ್ಧಿಯನ್ನು ಪಡೆದಿದ್ದರು. ತಂಜಾವರದ ಕಡೆಗೆ ಹೋಗಿ ಕರ್ನಾಟಕ ಗಾಯನ ಪದ್ಧತಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಬಂದ ಕುಂಚೂರ ಶಾಮಾಚಾರ್ಯರೆಂಬವರು ಈ ಮಂಡಳಿಗೆ ಸೂತ್ರಧಾರರಾಗಿದ್ದರು. ಆಗಿನ ನಾಟಕಗಳಲ್ಲಿ ಸೂತ್ರಧಾರನೇ ಎಲ್ಲ ಪದಗಳನ್ನು ಅನ್ನುತ್ತಿದ್ದುದರಿಂದ ಈ ಕೆಲಸಕ್ಕೆ ಒಳ್ಳೆ ಗಾನಕುಶಲನೇ ಬೇಕಾಗುತ್ತಿದ್ದನು. ಈ ಮಂಡಳಿಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಿದ್ದ ರಾಘವೇಂದ್ರಾಚಾರ್ಯ ಗುಡಿ ಎಂಬವರು ಅಭಿಜಾತ ನಟರಾಗಿದ್ದರು. ಮಿಕ್ಕ ನಟರೆಲ್ಲರೂ ರಾಘವೇಂದ್ರಾಚಾರ್ಯರಿಗೆ ಸಮಾನ ಯೋಗ್ಯತೆಯವರೇ ಆಗಿದ್ದರು. ಇವರು ಬಹುತರ ಶಾಂತಕವಿಗಳ ನಾಟಕಗಳನ್ನೆ ಆಡುತ್ತಿದ್ದರು. ಗದಗಿನ ಉಮಚಗಿ ಶೀನಪ್ಪನವರು ಬರೆದುಕೊಟ್ಟ ಜಾಂಬವತೀ ಪರಿಣಯ ಮುಂತಾದ ಒಂದೆರಡು ನಾಟಕ ಗಳನ್ನು ಇವರು ನಡುನಡುವೆ ಆಡುತ್ತಿದ್ದರು. ಹಲಸಿಗೆಯ ಹೆಸರುವಾಸಿಗಳಾಗಿದ್ದ ನಟ ರಂತೆಯೇ ಇವರು ಸದ್ಗುಣಿಗಳೂ ಸದಾಚಾರವಂತರೂ ಶೀಲಸಂಪನ್ನರೂ ಆಗಿದ್ದರು.

ಇದೇ ಸುಮಾರಿಗೆ ಧಾರವಾಡದಲ್ಲಿಯೂ ತಂತುಪುರಸನಾಟಕ ಮಂಡಳಿಯೆಂಬು ದೊಂದು ಮಂಡಳಿಯು ಉದಯವಾಯಿತು. ಭೀಮಾಚಾರ್ಯ ಏರಿ, ಗೋಪೀನಾಥ ರಾವ ಜೋಶಿ, ದತ್ತಾತ್ರೇಯರಾವ ಧಾರವಾಡ' ರಾಮಭಾವು ಹಲಸಗಿ ಮೊದಲಾದವರು

ಈ ಮಂಡಳಿಯಲ್ಲಿ ನಟರಾಗಿದ್ದರು. ಇವರು ಸುಮಾರು ಹನ್ನೆರಡು ವರ್ಷಗಳವರೆ
ಮಹಾರಾಷ್ಟ್ರ, ಗುಜರಾಥ, ವಿದರ್ಭ, ಮಧ್ಯಪ್ರಾಂತ, ಆಂಧ್ರದೇಶ ಮೊದಲಾ
ಪರಪ್ರಾಂತಗಳಲ್ಲಿಯೂ ಸಂಚಾರಮಾಡಿ ಆ ಪ್ರಾಂತಗಳ ಭಾಷೆಗಳಲ್ಲಿ ನಾಟಕಗಳನ್ನಾ
ಒಳ್ಳೇ ಲೌಕಿಕವನ್ನೂ ಹಣವನ್ನೂ ಗಳಿಸಿಕೊಂಡು ಬಂದರು. 1885ರ ಸುಮಾರಕ್ಕೆ
ಇಲ್ಲಿಗೆ ರೈಲ್ವೆ ಬರಲು ದೇಶಸಂಚಾರಕ್ಕೆ ಬೇಸತ್ತ ಇವರು ರೈಲ್ವೆ ಕಂಪನಿಯಲ್ಲಿ ಕೆಲಸಕ್ಕೆ
ಅಂಟಿಕೊಂಡು ನಾಟಕ ವ್ಯವಸಾಯಕ್ಕೆ ಶರಣು ಹೊಡೆದರು.

ಇಷ್ಟು ದಿವಸಗಳವರೆಗೆ ಅಚ್ಚಗನ್ನಡ ಸೀಮೆಯಾಗಿದ್ದ ಈ ಉತ್ತರ ಕರ್ನಾಟಕಕ್ಕೆ
ಈಗ ಮರಾಠಿಯ ಸೆರಗು ಸೋಂಕ ಹತ್ತಿತ್ತು. ಸಾಂಗಲಿಕರ ನಾಟಕ ಮಂಡ
ಮುಂಬಯಿ ಕರ ನಾಟಕ ಮಂಡಳಿ ಮೊದಲಾದವುಗಳ ಅಭಿಯೋಗಕ್ಕೆ ಇಲ್ಲಿಂದಲೆ
ಪ್ರಾರಂಭವಾಯಿತು. 1893 ರಲ್ಲಿ ಮಹಾರಾಷ್ಟ್ರದ ಸುಪ್ರಸಿದ್ಧ ಕಿರ್ಲೋಸ್ಕರ ಸಂಗೀತ
ಮಂಡಲಿಯು ಧಾರಾಡಕ್ಕೆ ಬಂದು ಸಂಗೀತ ಶಾಪಸಂಭ್ರಮ, ರಾಮರಾಜ್ಯ ವಿಯೋಗ
ಸೌಭದ್ರ ಮೊದಲಾದ ಪ್ರಯೋಗಗಳನ್ನು ಮಾಡಿತು 1895ರ ಸುಮಾರಕ್ಕೆ ಇಲ್ಲಿಯ
ರೈಲ್ವೆ ಕೆಲಸಗಾರರೊಳಗಿನ ಕೆಲವರು ಬೇರೆ ಜನರನ್ನು ಕಲೆ ಹಾಕಿ "ಹಿಂದೂ
ಯೂನಿಯನಕ್ಲಬ್" ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡು "ತ್ರಾಟಿಕಾ" ಎಂ
ಮರಾಠೀ ನಾಟಕವನ್ನು ಪ್ರಯೋಗಿಸಿದರು. ಪುಣೆಯ ಫರಗ್ಯೂಸನ್ ಕಾಲೇಜದಲ್ಲಿ
ಪ್ರೊಫೇಸರರಾಗಿದ್ದ ಶ್ರೀ ಕೇಳಕರರೆಂಬವರು ಇದನ್ನು ಶೇಕ್ಸಪಿಯರನ ಟೇಮಿಂಗ್ ಅಫ
ದಿ ಶ್ರೂ ನಾಟಕದ ಆಧಾರದಿಂದ ಬರೆದಿರುವರು. ಮಹಾರಾಷ್ಟ್ರದ ಸುಪ್ರಸಿದ್ಧ ಗಡ
ನಾಟಕ ಮಂಡಳಿಯಾಗಿದ್ದ ಶಾಹೂನಗರವಾಸೀ ನಾಟಕ ಮಂಡಳಿಯವರು ಇದನ್ನು
ಅತಿಹೃದಯಂಗಮವಾಗಿ ಮಾಡುತ್ತಿದ್ದರೆಂದು ಇಂದಿಗೂ ಖ್ಯಾತಿಯುಂಟು. ಧಾರವಾ
ದವರ ಈ ಪ್ರಯೋಗವು ಶಾಹೂನಗರವಾಸಿಯವರಿಗಿಂತ ಗುಂಜಿತೂಕ ಹೆಚ್ಚೇ ನೆಟ್ಟ
ಗಾಯಿತೆಂದು ಹೇಳಬಹುದು. ಮುಂದೆ ಧಾರವಾಡದ ರಂಗಭೂಮಿಯ ಮೇಲೆ
'ಪಾಣಿಪತಚಾ ಮುಕಾಬಲಾ' 'ರಾಣಾಭೀಮದೇವ' 'ನರವೀರ ಮಾಲುಸರೇ
ಮೊದಲಾದ ಮರಾಠೀ ಪ್ರಯೋಗಗಳನ್ನು ಇಲ್ಲಿಯವರೇ ಮಾಡಿದರು. ವಿಜಾಪು
ದಲ್ಲಿಯೂ ಇದೇ ಸುಮಾರಕ್ಕೆ ಕೌಜಲಗೀ ಶ್ರೀನಿವಾಸರಾಯರು, ಮುಗಳಿ ಶ್ರೀನಿವಾ
ರಾಯರು ಮೊದಲಾದ ಕನ್ನಡ ಪದವೀಧರರು "ರಾಣಾಭೀಮದೇವ" ಎಂಬ ಮರಾ
ನಾಟಕವನ್ನು ಅತ್ಯಂತ ಸಮರ್ಪಕವಾಗಿ ಪ್ರಯೋಗಿಸಿದ ಸಂಗತಿಯು ಜನಜನಿತವಾಗಿದೆ

ಮೇಲೆ ಗೊಂಬೆಯಾಟಗಳ ಪ್ರಸಕ್ತಿಯಲ್ಲಿ ಅಸರಾಳ ತಮ್ಮಣ್ಣಪ್ಪನವರ ಕೃಷ್ಣ
ಪಾರಿಜಾತವೆಂಬ ಕಾವ್ಯದ ಉಲ್ಲೇಖವು ಮಾಡಲಾಗಿದೆಯಷ್ಟೇ ? ಇದೇ ಕೃಷ್ಣ ಪಾರಿಜಾ
ವನ್ನು ನಾಟಕ ರೂಪವಾಗಿ ರಂಗಭೂಮಿಯ ಮೇಲೆ ಪ್ರಯೋಗಿಸುವ ಸಾಹಸವನ್ನು ಈ
ಭಾಗದಲ್ಲಿ ಕೆಲವರು ಮಾಡಿರುತ್ತಾರೆ. ಇಂಥವರಲ್ಲಿ ಕೌಜಲಗಿಯ ನಿಂಗಾಸಾನಿಯ
ಅತ್ಯಂತ ವಿಖ್ಯಾತಳಾಗಿರುವಳು. ಸುಮಾರು 35 ವರ್ಷಗಳ ಹಿಂದೆ ಈ ಊರೊಳಗಿ
ವಿಕ್ಟೋರಿಯಾ ಥಿಯೇಟರಿನಲ್ಲಿ ಇವಳ ಆಟಗಳನ್ನು ನೋಡಿದವರು ಇನ್ನೂ ಎಷ್ಟೋ

ಜನರಿರುವರು. ನಾಟ್ಯಕಲೆಯ ಮುಖ್ಯಾಂಗಗಳಾದ ರಸಭಾವ ಪೂರ್ಣ ಗಾಯನವೂ, ಗಾನಾನುರೂಪ ನರ್ತನವೂ, ಭಾವಪ್ರಕಾಶಕ್ಕೆ ಅನುಗುಣವಾದ ಅಭಿನಯವೂ ಮೊದಲಾದವುಗಳಿಂದ ಇವಳು ಇಲ್ಲಿಯ ರಸಿಕ ಪ್ರೇಕ್ಷಕರನ್ನು ತಲೆದೂಗಿಸದೆ ಬಿಡುತ್ತಿದ್ದಿಲ್ಲವೆಂಬುದನ್ನು ಅವರು ಇಂದಿಗೂ ಸಾಕ್ಷೀನುಡಿಯಬಹುದು. ಇವಳ ನೃತ್ಯದ ವಿಶೇಷ ಪ್ರಕಾರವೆಂದರೆ ತಲೆಯ ಮೇಲೆ ದೀಪ ಹಚ್ಚಿದ ಸಮಯವಿಟ್ಟುಕೊಂಡು ಲಯತಾಲಬದ್ಧವಾಗಿ ಕುಣಿಯುವದು. ಯಾವ ಅಂಗ ಭಂಗಿಗಳಿಂದ ಕುಣಿದರೂ ತಲೆಯ ಮೇಲಿನ ಸಮಯು ಅಲುಗಾಡುವಂತಿಲ್ಲ; ದೀಪಕ್ಕೆ ಧಕ್ಕೆ ತಗಲುವಂತಿಲ್ಲ. ಈ ನಾಟ್ಯ ಕೌಶಲವೂ ಕೂಡ ನಮ್ಮ ಕನ್ನಡ ನಾಡಿನ ವಿಶಿಷ್ಟ ಸೊತ್ತೆನಂತಾಗಿದೆ. ಅದವಾನಿ ಸುರಪುರದತ್ತ ಕಡೆಯ ನರ್ತಕಿಯರಲ್ಲಿ ಇನ್ನೂ ಈ ಬಗೆಯ ನರ್ತನ ಕೌಶಲ್ಯವು ಅಭಿನಯ ಪ್ರಾವೀಣ್ಯವೂ ಕಂಡುಬಂದಿಲ್ಲವೆಂದು ತಿಳಿಯುತ್ತದೆ. ಕೌಜಲಗಿ ನಿಂಗಾಸಾನಿಯು ಮುಧೋಳ ಸಂಸ್ಥಾನದ ಮಹಾಲಿಂಗಪುರದಲ್ಲಿ ಇನ್ನೂ ಇರುವಳು. ಮುಪ್ಪಿನ ಮುದಿಕೆಯಾಗಿ ಮೂಲಿಗುಂಪಾಗಿರುವಳು. ಆದರೂ ಅವಳ ಕರ್ನಾಟಕ ಗಾಯನದೊಳಗಿನ ಇಂಪು ಅಡಗಿಲ್ಲವೆಂದು ಹೇಳುತ್ತಾರೆ. ಕನ್ನಡ ನಾಡಿನ ದುರ್ದೈವದಿಂದ ಈಗೀಗ ಅವಳ ಹೆಸರು ಕೇಳುವುದು ಕೂಡ ದುರ್ಲಭವಾಗಿದೆ. ಕನ್ನಡಿಗರ ಪರಂಪರಾ ವಿಚ್ಛೇದದ ಅಸಂಖ್ಯ ದೃಷ್ಟಾಂತಗಳಲ್ಲಿ ಇದೂ ಒಂದಾಗಬಹುದು.

ಇದೇ ಸುಮಾರಕ್ಕೆ ಧಾರವಾಡದಲ್ಲಿ ಕನ್ನಡ ನಾಟಕಗಳ ಪರಂಪರೆಯನ್ನು ಕಾಯುವುದಕ್ಕೆ ಒಂದು ಚಿಕ್ಕ ಪ್ರಯತ್ನವಾಯಿತು. 1896 ರಿಂದ ಇಲ್ಲಿ ಪ್ರಾರಂಭವಾದ ಸಾರ್ವಜನಿಕ ಗಣಪತ್ಯುತ್ಸವದಲ್ಲಿ ಮದಿಹಾಳದ ಪ್ರಾಚ್ಯಕ್ರೀಡಾ ಸಂವರ್ಧಕ ಮಂಡಳಿಯವರು ಪ್ರತಿವರ್ಷ ಒಂದೊಂದು ಕನ್ನಡ ನಾಟಕ ಪ್ರಯೋಗವನ್ನು ಮಾಡುತ್ತಿದ್ದರು. ಈ ನೈಮಿತ್ತಿಕ ಪ್ರಯತ್ನಕ್ಕೇ ಒಂದು ಬಗೆಯ ರೂಪವನ್ನಳವಡಿಸಿ ಒಂದು “ಅಮೇಚೂರ” ಸಂಘವನ್ನು ಸ್ಥಾಪಿಸಬೇಕೆಂಬ ಹಂಬಲವು ಕೆಲವರ ಅಂತರಂಗದಲ್ಲಿ ಉದಯಿಸಿತು. ಉಚ್ಚ ತರಗತಿಯ ಕನ್ನಡ ನಾಟಕಗಳನ್ನು ರಂಗಭೂಮಿಯ ಮೇಲೆ ಅಚ್ಚುಮೆಚ್ಚಾಗುವ ರೀತಿಯಿಂದ ಆಡಿ ತೋರಿಸುವದು ಅಶಕ್ಯವೇ ಹೇಗೆಂಬುದನ್ನು ಪರೀಕ್ಷಿಸಿ ನೋಡಬೇಕೆಂಬುದೇ ಈ ಹಂಬಲದ ಉದ್ದೇಶವಾಗಿತ್ತು. 1904ರಲ್ಲಿ “ಭರತ ಕಲೋತ್ತೇಜಕ ಸಂಗೀತ ಸಮಾಜ” ಎಂಬ ಸಂಸ್ಥೆಯು ಇಲ್ಲಿ ಸ್ಥಾಪಿತವಾಯಿತು. ಈ ಉತ್ತರ ಕರ್ನಾಟಕದಲ್ಲಿ ಕನ್ನಡ ನಾಟಕಗಳನ್ನು ಕಲೋಪಾಸನೆಯ ಬುದ್ಧಿಯಿಂದ ಆಡಿ ತೋರಿಸಬೇಕೆಂದು ಹೊರಟ “ಅಮೇಚೂರು” ಸಂಘಗಳಲ್ಲಿ ಇದೇ ಮೊದಲನೆಯದೆಂದು ಹೇಳಲು ಅಡ್ಡಿ ತೋರುವುದಿಲ್ಲ. ಈ ಸಮಾಜದವರು ಸುಸಂಸ್ಕೃತ ರಸಿಕ ಕನ್ನಡಿಗರಿಗೆ ಮೊದಲಿನಿಂದಲೂ ಪ್ರಿಯವಾಗಿ ಅಭಿಮಾನ ಪಾತ್ರವಾಗಿದ್ದ ಚುರಮರಿಯವರ ಶಾಕುಂತಲವನ್ನೇ ಮೊದಲು ಕೈಕೊಂಡರು. ಇದರ ನಾಲ್ಕು ಅಂಶಗಳ ಪ್ರಯೋಗವನ್ನು 1905ರ ಫೆಬ್ರುವರಿಯಲ್ಲಿ ಮಾಡಿದರು. ಸ್ವ. ವಾ. ವೆಂಕಟರಂಗೋ ಕಟ್ಟಿ, ದಿ. ಬ. ರೊದ್ದ ಮೊದಲಾದ ಕರ್ನಾಟಕ ಸಂಸ್ಕೃತಿಯ ಅಭಿಮಾನಿಗಳಾದ ಪ್ರಮುಖರು

ಪ್ರಯೋಗವು ಸರಸವಾದ ಬಗ್ಗೆ ಆನಂದವನ್ನು ವ್ಯಕ್ತಪಡಿಸಿದರು. ಮುಂದೆ ಇವರು
ಮುರಾರೀ ಸೌಭದ್ರ ಹಾಗು ರಾಮರಾಜ್ಯ ವಿಯೋಗ ಇವುಗಳ ಕನ್ನಡ ಅನುವಾದವನ್ನು
ಹಾಗೂ ಕೈ. ವಾ. ನ್ಯಾಸರಗಿ ಉಳವೀಶ ಕವಿಯು ಬರೆದ ಮೃಚ್ಛಕಟಿಕವನ್ನೂ
ಆಡಿದರು. ಧಾರವಾಡದ ಕನ್ನಡ ನಾಟ್ಯಕಲಾ ಪುರಸ್ಕರ್ತರ ಆದರಕ್ಕೂ ಸಮಾಜವು
ಪಾತ್ರವಾಯಿತು. ಸ್ವ. ವಾ. ಕರಿಗುದರಿ ನಾರಾಯಣರಾಯರು, ವಿದ್ಯಮಾನ ಆನಾಡ
ಚನವೀರಪ್ಪನವರು, ನರಗುಂದ ರಾಮರಾಯರು ಆಲೂರ ವೆಂಕಟರಾಯರು ಇವರೇ
ಮೊದಲಾದ ಕನ್ನಡದ ಅಭಿಮಾನಿಗಳಾದ ರಸಿಕರು, ಸಮಾಜಕ್ಕೆ ಪ್ರತ್ಯಕ್ಷ ಸಹಾಯ
ಮಾಡಿ ಅದನ್ನು ಮುಂದರಿಸಿದರು. ದೇಶಪಾಂಡೆ ತಿರುಮಲರಾಯರಂಥ ಪ್ರತಿಷ್ಠಿತ
ಮನೆತನದ ಗಾನಕುಶಲರು ಸಮಾಜಕ್ಕೆ ಬಂದು ಕೂಡಿಕೊಂಡು ಪ್ರಸಿದ್ಧ ನಟರಾದರು.
ವೈದ್ಯ ಸುಬ್ಬಣ್ಣನವರ ಭೂಮಿಕೆಯು, ದೇಶಪಾಂಡೆ ತಿರುಮಲರಾಯರ ದುಷ್ಯಂತ
ಕೃಷ್ಣರ ಭೂಮಿಕೆಗಳು, ಸ್ವ. ವಾ. ಅವಧಾನಿ ತಮಣಾಚಾರ್ಯರ ದಶರಥ ಶಕಾ
ಭೂಮಿಕೆಗಳು, ಸಂಬಳದ ಈರಯ್ಯನ ಶಕುಂತಲಾ ಸುಭದ್ರಾ ವಸಂತಸೇನಾ ಪಾತ್ರಗಳು
ಸ್ವ. ಮಾದನಭಾವಿ ವೆಂಕಟರಾಮನ ಕೈಕೆಯೀ ರುಕ್ಮಿಣೀಯ ಪಾತ್ರಗಳು, ನೀಲಗಾ
ಕುಬೇರನ ಅಂಬುಕನ ಪಾತ್ರವು ಕನ್ನಡ ರಂಗಭೂಮಿಯ ಮೇಲೆ ಅಭೂತಪೂರ್ವವಾದ
ವೆಂದು ಸ್ವ. ವಾ. ರಾವಜೀರಾವ ಕರಂದೀಕರ, ವೆಂಕಟರಂಗೋಕಟ್ಟಿ, ದಿ. ಬ. ರೊದ್ದ
ಶಾಂತಕವಿಗಳು ಮೊದಲಾದವರು ಹಾಗು ಶ್ರೀ ರಾ. ಹ. ದೇಶಪಾಂಡೆ, ಎಸ್. ಎಸ್
ಸೆಟ್ಲೂರ್, ವಿನಾಯಕರಾವ ಜೋತಿ ಮೊದಲಾದ ಮಹನೀಯರೆಲ್ಲರೂ ತಮ್ಮ ತಮ
ಬೇರೆ ಬೇರೆ ಅಭಿಪ್ರಾಯಗಳಿಂದ ಸಮಾಜವನ್ನು ಗೌರವಿಸಿದರು. ಹೀಗೆ ಕನ್ನಡ ನಾಟ
ಗಳ ವಿಷಯವಾಗಿ ಧಾರವಾಡದ ವಾತಾವರಣವು ತಿಳಿಗಟ್ಟುತ್ತ ನಡೆದ ಹೊತ್ತಿಗೆ
ಇಲ್ಲಿಯ ರೈಲ್ವೇ ಕಚೇರಿಗಳು ಮದ್ರಾಸಕ್ಕೆ ಹೋದ ಮೂಲಕ ಈ ಸಮಾಜಕ್ಕೆ ಆಧಾ
ಸ್ತಂಭವಾಗಿದ್ದ ಅನೇಕ ಜನ ನಟರೂ ಧಾರವಾಡ ಬಿಡುವ ಪ್ರಸಂಗ ಬಂದು, ಸಮಾಜಕೆ
ದೊಡ್ಡ ಹಾನಿಯೊದಗಿ ಅದರ ಕಾರ್ಯೋತ್ಸಾಹವು ಕುಗ್ಗುವದಕ್ಕೆ ಮಾರ್ಗವಾಯಿತು
ಆದರೂ ದೇಶಪಾಂಡೆ ತಿರುಮಲರಾಯರೇ ಮೊದಲಾದವರು ಹೊಸ ಜನರನ್ನು ಸೇರಿ
ಕೊಂಡು ಮುಂದೇ ಆರೇಳು ವರ್ಷಗಳವರೆಗೆ ಸಮಾಜವನ್ನು ಒಳ್ಳೆ ಹುರುಪಿನಿಂ
ಪ್ರಯತ್ನಪೂರ್ವಕವಾಗಿ ನಡಿಸಿದರು. ಈ ಅವಧಿಯೊಳಗೆ ವಿಶ್ವಗುಣಾದರ್ಶ ನಾಟ
ಮಂಡಳಿಗಾಗಿ ರಚಿಸಲ್ಪಟ್ಟ ಹೊಸಮಾದರಿಯ ಪದ್ಮಾವತೀ ನಾಟಕವನ್ನು ಇವರ
ಆಡಿದರು. ಈ ಪ್ರಯೋಗವು ಧಾರವಾಡದ ರಸಿಕರನ್ನು ತಣಿಸದೆ ಬಿಡಲಿಲ್ಲ. ಹೀ
ಸಮಾಜದ ಮೂಲ ಉದ್ದೇಶವು ಅಲ್ಪಸ್ವಲ್ಪ ಮಟ್ಟಿಗೆ ನೆರವೇರಿ ಕನ್ನಡ ಭಾಷೆ ಹಾಗ
ನಾಟ್ಯಕಲೆ ಇವುಗಳಮೇಲಿನ ಮೊದಲಿನ ಆಕ್ಷೇಪಣೆಗಳೂ ಅಪಕೀರ್ತಿಯೂ ಎಷ್ಟೊ
ಮಟ್ಟಿಗೆ ಕಡಿಮೆಯಾಗಲು ಅವಕಾಶವಾಯಿತೆಂದು ಹೇಳಲು ಅಡ್ಡಿಯಿಲ್ಲ.

ಮುಂದೆ ನಮ್ಮ ಉತ್ತರ ಕರ್ನಾಟಕದಲ್ಲಿ ಹಲವು ಕಡೆಗೆ ಇದೇ ಉದ್ದೇಶದಿಂ
ಅನೇಕ ಅಮೇಚೂರ ಸಂಘಗಳು ಸ್ಥಾಪಿತವಾಗಿ ಕಾರ್ಯಮಾಡಿರುತ್ತವೆ. ಕೆಲ

ಇನ್ನೂ ಮಾಡುತ್ತಿವೆ. ಇವುಗಳಲ್ಲಿ ಗದಗಿನ "ಯಂಗ್‌ಮೆನ್ಸ್ ಫುಟ್‌ಬಾಲ್ ಆಮೇಚೂರ್ಸ್" ವಿಜಾಪುರದ ಭಾರತ ಸೇವಕ ಸಮಾಜ" "ಧಾರವಾಡದ ಕರ್ನಾಟಕ ಕಾಲೇಜ ಆಮೇಚೂರ್ಸ್" "ದಿ ಧಾರವಾಡ ಆಮೇಚೂರ್ಸ್" ಮೊದಲಾದವುಗಳ ಉಲ್ಲೇಖವನ್ನು ಮಾಡುವರದು ಅಗತ್ಯವಾಗಿದೆ. ಗದಗಿನ ಆಮೇಚೂರ್ ಸಂಘದವರು ಶ್ರೀ ನಾರಾಯಣ ರಾವ್ ಹೂಯಿಲಗೋಳ; ಬಿ. ಎ., ಎಲ್. ಎಲ್. ಬಿ. ಯವರು ಬರೆಯುವ ನಾಟಕಗಳನ್ನು ಪ್ರಯೋಗ ಮಾಡುತ್ತಾರೆ. ಪ್ರತಿವರ್ಷ ಬಹುತೇಕ ಹಿಂದೊಂದು ಹೊಸ ನಾಟಕವೇ ಇವರಿಂದ ಪ್ರಯೋಗಿಸಲ್ಪಡುತ್ತದೆ. ವಜ್ರಮುಕುಟ. ರಾಮಕುಮಾರ, ಸ್ತ್ರೀಧರ್ಮರಹಸ್ಯ, ಶಿಕ್ಷಣಸಂಭ್ರಮ, ವಿದ್ಯಾರಣ್ಯ, ಕೃಷ್ಣಸಂಧಾನ ಮೊದಲಾದ ಹಲವು ನಾಟಕಗಳನ್ನು ಇವರು ರಂಗಭೂಮಿಯ ಮೇಲೆ ತಂದಿದ್ದಾರೆ. ಬಾಗಲಕೋಟೆಯ ಸಂಘದವರು ಸ್ವ. ವಾ. ಶಿರೂರು ವಾಸುದೇವಾಚಾರ್ಯರ ನಾಟಕಗಳ ನ್ನಾಡಬೇಕೆಂದು ಆರಂಭಿಸಿ "ಪತೀವಶೀಕರಣ" ವೆಂಬ ಗದ್ಯ ನಾಟಕವನ್ನು ಆಡಿರುತ್ತಾರೆ. ಇದು ಗೋಲ್ಡ್‌ಸ್ಮಿತ್‌ನ "ಶಿ ಸ್ಟೂಪ್ಸ್ ಟು ಕಾಂಕರ್" ಎಂಬ ನಾಟಕದ ಅನುವಾದವಾಗಿದೆ. ವಿಜಾಪುರದವರು ಆತ್ಮಶುದ್ಧಿ, ಸಂಧ್ಯಾರಾಗ, ಪ್ರೇಮಭಂಗ ಮೊದಲಾದವುಗಳನ್ನು ಆಡಿದರು. ಈಗ ಇವರ ಸದ್ದಿಲ್ಲಿಯೂ ಕೇಳುವುದಿಲ್ಲ. ಕರ್ನಾಟಕ ಕಾಲೇಜ ಆಮೇಚೂರ್ಸ್‌ರು ಪ್ರತಿವರ್ಷ ಒಂದೊಂದು ನಾಟಕದಂತೆ ತಾಳೀಕೋಟೆ, ಸುರತ್ ನಗರದ ಶ್ರೇಷ್ಠಿ, ಸ್ತ್ರೀಧರ್ಮ ರಹಸ್ಯ, ಆತ್ಮಶುದ್ಧಿ ಮೊದಲಾದವುಗಳನ್ನು ಆಡಿರುತ್ತಾರೆ. ಧಾರವಾಡ ವಿಜಾಪುರ ಜಿಲ್ಲೆಗಳ ಸೀಮೆಯನ್ನು ದಾಟಿ, ಅತ್ತ ನಿಜಾಮ ಕರ್ನಾಟಕದಲ್ಲಿ ಕಲಬುರ್ಗಿ ರಾಯಚೂರು ಹೈದರಾಬಾದ ಮೊದಲಾದ ಕಡೆಗೂ ಇತ್ತಿತ್ತಲಾಗಿ ಕನ್ನಡಿಗರ ಆಮೇಚೂರ್ ನಾಟಕ ಸಂಘಗಳು ಸ್ಥಾಪಿತವಾಗಿ ಕನ್ನಡ ನಾಟಕಗಳು ಪ್ರಯೋಗಿಸಲ್ಪಡ ಹತ್ತಿವೆ. ಇವೆಲ್ಲವುಗಳಲ್ಲಿ ಸುಸಂಸ್ಕೃತ ಸುಶೀಲ ತರುಣ ಕನ್ನಡಿಗರೇ ಕೆಲಸ ಮಾಡುತ್ತಾರೆ. ಹಲಕೆಲವರು ವಿಶ್ವವಿದ್ಯಾಲಯದ ಪದವೀಧರರೂ ಇರುತ್ತಾರೆ.

ಮರಾಠೀ ನಾಟಕಗಳ ಪ್ರಾಬಲ್ಯವು ಇಲ್ಲಿ ಹೆಚ್ಚಾದ ಕಾಲಕ್ಕೆ ಹುಟ್ಟಿದ ಬಾದಾಮೀ ಸಂಗೀತ ಮಂಡಳಿಯ ತರುವಾಯ ಕೊಣ್ಣೂರ ನಾಟಕ ಮಂಡಳಿಯ ಉಲ್ಲೇಖನವನ್ನು ಇಲ್ಲಿ ಮಾಡಬೇಕಾಗಿದೆ. ಬೈಲಹೊಂಗಲದ ಶ್ರೀ ಕಣಬರಗಿ ಮಠ ಶಿವಮೂರ್ತಿ ಸ್ವಾಮಿಗಳು ಇದಕ್ಕೆ ಮೂಲಕಾರಣಪುರುಷರು. ಕನ್ನಡ ನಾಟ್ಯಕಲೆಯನ್ನು ಬೆಳೆಸುವ ಗುರಿಯನ್ನು ಮುಂದಿಟ್ಟುಕೊಂಡು ಇವರು ಈ ಮಂಡಳಿಯನ್ನು ಸ್ಥಾಪಿಸುವ ಸಾಹಸಕ್ಕೆ ಕೈಯಿಕ್ಕಿದರು ಸಾವಿರಾರುಗಟ್ಟಲೆ ಹಣವನ್ನು ಪುಡಿಬೆಲ್ಲದಂತೆ ವೆಚ್ಚಮಾಡಿ ಆಧುನಿಕ ನಾಟಕ ಮಂಡಳಿಗಳಿಗೆ ಆವಶ್ಯಕವಾದ ಎಲ್ಲ ಬಗೆಯ ಸಾಧನಸಲಕರಣಿಗಳನ್ನು ಒದಗಿಸಿಕೊಟ್ಟು ಈ ಮಂಡಳಿಯು ಕನ್ನಡ ನಾಡಿನ ನಾಟಕ ಸಂಘಗಳಲ್ಲಿ ಮೇಲ್ತರ ಗತಿಯದೆನಿಸಿ ಚಿರಕಾಲ ಬಾಳಿ ಬದುಕುವಂತಾಗುವದಕ್ಕೆ ಒಂದೇಸಮನೆ ಧಡಬಡಿಸಿ ಕಷ್ಟಪಟ್ಟರು. ಕನ್ನಡ ನಾಡಿನ ರಂಗಭೂಮಿಯ ತಿದ್ದುಪಾಟನ ಕಡೆಗೆ ಯಾರೂ ಕಣ್ಣೆತ್ತಿಕೂಡ ನೋಡಲಾರದಾಗಿದ್ದ ಕಾಲದಲ್ಲಿಯೂ ಶ್ರೀ ಶಿವಮೂರ್ತಿ ಸ್ವಾಮಿಗಳು ಮಿತಿಮೀರಿ

ಮಾಡಿದ ಈ ಪ್ರಯತ್ನವು ಕನ್ನಡ ರಂಗಭೂಮಿಯ ಭಾಗದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತಿರುವುದು. ಕೊಣ್ಣೂರ ಕಂಪನಿಯು ಇಂದಿಗೆ ನಾಮಶೇಷವಾಗಿದ್ದರೂ ಶ್ರೀ ಶಿವಮೂರ್ತಿಸ್ವಾಮಿಗಳು ಅದಕ್ಕಾಗಿ ಮಾಡಿದ ವೆಚ್ಚವೂ ಪಟ್ಟ ಪರಿಶ್ರಮವೂ ಇಂದಿಗೆ ಬೇರೊಂದು ರೂಪದಲ್ಲಿ ಕನ್ನಡಿಗರ ಕಣ್ಣಿಗೆ ಹೊಳೆಯದಿರಲಾರದು. ಯಾವ ಬಗೆಯ ಪ್ರತಿಫಲದ ಆಶೆಯನ್ನೂ ಹಿಡಿಯದೆ ಮಾಡಿದ ಸತ್ಕಾರ್ಯವು ಸದ್ಯಃ ಫಲದಾಯಿಯಾಗದಿದ್ದರೂ ಕಾಲಕ್ರಮದಲ್ಲಿ ಅದು ಫಲಿಸಿಯೇ ತೀರಬೇಕೆಂಬುದು ಸೃಷ್ಟಿಕರ್ತನ ಸಿದ್ಧಾಂತವಾಗಿದೆ. ಕೆಲವರಿಗೆ ಒಂದೇ ಜನ್ಮದಲ್ಲಿ ಅದನ್ನು ನೋಡುವ ಭಾಗ್ಯವು ದೊರೆಯಬಹುದು; ಕೆಲವರಿಗೆ ಜನ್ಮಾಂತರದವರೆಗೆ ದಾರೀ ನೋಡಬೇಕಾಗಬಹುದು. ಕನ್ನಡ ನಾಟ್ಯ ಕಲೆಯ ಉನ್ನತಿಗಾಗಿ ಶ್ರೀ ಶಿವಮೂರ್ತಿಸ್ವಾಮಿಗಳು ಮಾಡಿದ ಸಾಹಸ, ಪಟ್ಟ ಪರಿಶ್ರಮಗಳು ಅಲ್ಪ ಸ್ವಲ್ಪ ಮಟ್ಟಿಗಾದರೂ ಇಂದು ಅವರ ಕಣ್ಣಿಗೆ ಬೀಳುವಂತಾಗಿರುವದು ಅವರಿಗೆ ಅಲ್ಪಸ್ವಲ್ಪ ಸಮಾಧಾನದ ಮಾತಾಗಿರಲಾರದು. ಈ ದೃಷ್ಟಿಯಿಂದ ನೋಡಿದರೆ ಶ್ರೀ ಸ್ವಾಮಿಗಳವರು ಕನ್ನಡ ರಂಗಭೂಮಿಯ ಮೇಲೆ ಮಹದುಪಕಾರ ಮಾಡಿರುವರೆಂದೇ ಕೃತಜ್ಞತಾ ಪೂರ್ವಕ ಒಪ್ಪಿಕೊಳ್ಳಬೇಕಾಗಿದೆ.

ಕೊಣ್ಣೂರ ಕಂಪನಿಯ ತರುವಾಯದಲ್ಲಿ ಶಿರಹಟ್ಟಿಯ ವೆಂಕೋಬರಾಯರ ಮಹಾಲಕ್ಷ್ಮೀ ನಾಟಕ ಕಂಪನಿಯ ನಾಮನಿರ್ದೇಶ ಮಾಡಬೇಕಾಗಿದೆ. ಇದು 1904 ರಲ್ಲಿ ಹುಟ್ಟಿ ಈಗ 25 ವರ್ಷಗಳವರೆಗೆ ಅವ್ಯಾಹತವಾಗಿ ಸಾಗಿ ಬಂದಿದೆ. ಪದ್ಮಾವತೀ, ಕಾಳಿದಾಸ, ಕೃಷ್ಣಲೀಲೆ, ಸಂಪೂರ್ಣ ರಾಮಾಯಣ ಮೊದಲಾದ ನಾಟಕಗಳನ್ನು ಈ ಮಂಡಳಿಯವರು ಮೊದಲಿನಿಂದಲೂ ಆಡುತ್ತ ಬಂದಿರುವರು. ಇತ್ತಿತ್ತಲಾಗಿ ತೋರಣಗಲ್ಲ ರಾಜೇರಾಯರೆಂಬ ಮಹಾ ಸಮರ್ಥ ಕವಿಗಳು ಬರೆದ ರಾಮಾಂಜನೇಯ ಯುದ್ಧವೆಂಬ ನಾಟಕವನ್ನಾಡುವರಾಗಿ ಕೇಳಿಕೆಯಲ್ಲಿದೆ. ಮೊನ್ನೆ ಮೊನ್ನೆ ದಶಾವತಾರ ನಾಟಕವನ್ನು ಇವರು ಆಡಿದ್ದಾಗಿ ವರ್ತಮಾನವಿದೆ. ಇಲ್ಲಿಯ ಸ್ವ.ವಾ. ಮಮದಾಪುರ ಗುರುರಾಯರು ಬರೆದ ಇಂದಿರಾ ಎಂಬ ಮರಾಠಿ ಶಾರದಾ ನಾಟಕದ ಭಾಷಾಂತರವನ್ನು ಇವರು ಮೊದಲು ಮೊದಲು ಪ್ರಯೋಗಿಸುತ್ತಿದ್ದುದೂ ಉಂಟು.

ಶಿರಹಟ್ಟಿಯ ಕಂಪನಿಯಲ್ಲಿ ಕೆಲಕಾಲ ಮುಖ್ಯ ನಟರಾಗಿದ್ದ ವಾಮನರಾಯರೂ ಬೇರೆ ಕೆಲವರೂ ಅಲ್ಲಿಂದ ಹೊರಬಿದ್ದು 1213ರ ಸುಮಾರಕ್ಕೆ ವಿಶ್ವಗುಣಾದರ್ಶ ನಾಟಕ ಮಂಡಳಿಯೆಂಬ ಹೊಸ ಮಂಡಳಿಯನ್ನು ಏರ್ಪಡಿಸಿಕೊಂಡು ಇಂದಿಗೂ ನಡೆಸಿದ್ದಾರೆ. ಇವರೂ ಮೊದಲು ಮೊದಲು ಪದ್ಮಾವತೀ. ಕಾಳಿದಾಸ, ಕೃಷ್ಣಲೀಲಾ, ಇಂದಿರಾ ಮೊದಲಾದ ನಾಟಕಗಳನ್ನೇ ಮಾಡುತ್ತಿದ್ದರು. ಆದರೆ ಇತ್ತಿತ್ತಲಾಗಿ ಸಂತಸಖೂಬಾಯಿ, ಬಾಜೀರಾಯ ಪೇಶವೇ, ಸಂಶಯ ಕಲ್ಲೋಳ, ಸಿಂಹಾಚಾ ಛಾವಾ ಮೊದಲಾದ ಮರಾಠೀ ನಾಟಕಗಳ ಭಾಷಾಂತರಗಳಿಂದ ಕನ್ನಡ ರಂಗಭೂಮಿಯನ್ನು ಸಿಂಗರಿಸಹತ್ತಿದ್ದಾರೆ.

ವಿಶ್ವಗುಣಾದರ್ಶ ಮಂಡಲಿಯಲ್ಲಿ ಮುಖ್ಯ ನಟಿಯ ಕೆಲಸ ಮಾಡುತ್ತಿದ್ದ

"ಗಾನರತ್ನ" ಗಂಗೂಬಾಯಿ ಗುಳೇದ ಗುಡ್ಡ ಎಂಬವಳು ಅಲ್ಲಿಂದ ಹೊರಬಿದ್ದು ಶ್ರೀ ಕೃಷ್ಣ ನಾಟಕಮಂಡಳಿಯೆಂಬ ಬೇರೆ ಕಂಪನಿಯನ್ನು ಸ್ಥಾಪಿಸಿದಳು. ಇದು ಸಂತಸಖೂಬಾಯಿ ಮೊದಲಾದ ಮರಾಠೀ ನಾಟಕಗಳ ಭಾಷಾಂತರಗಳನ್ನೇ ಪ್ರಯೋಗಿಸುತ್ತಿರುವುದಲ್ಲದೆ ಮೊನ್ನೆ ಮೊನ್ನೆ ಧಾರವಾಡದ ಶ್ರೀ ಹಣಮಂತ ಪೀತಾಂಬರ ಜೋಶಿಯವರು ಬರೆದಿರುವ "ರಾಜವಲ್ಲಭ" ಎಂಬ ಹೊಸ ನಾಟಕದ ಪ್ರಯೋಗವನ್ನು ಮಾಡಹತ್ತಿದೆ.

ಲಕ್ಷ್ಮೇಶ್ವರದ ಸುಪ್ರಸಿದ್ಧ ಗಾಯನ ಕುಶಲಮನೆತನದ ಬಚ್ಚಾಸಾನಿಯವರೂ ಅವರ ಹೆಣ್ಣುಮಕ್ಕಳೂ ಬೇರೆ ಕೆಲವು ಜಿನ ಸ್ತ್ರೀಯರನ್ನು ಕೂಡಿಕೊಂಡು ಒಂದು ನಾಟಕ ಮಂಡಳಿಯನ್ನು ಈಗ ಬಹು ದಿವಸಗಳ ಹಿಂದೆ ಏರ್ಪಡಿಸಿದ್ದರು. ಈ ಮಂಡಳಿಯವರು ಚುರಮರಿಯವರ ಶಾಕುಂತಲದ ಗದ್ಯ ಭಾಗವನ್ನಷ್ಟು ಎತ್ತಿಕೊಂಡು ಬೇರೆ ಪದಗಳನ್ನು ಸೇರಿಸಿ ಆ ನಾಟಕವನ್ನು ಮಾಡುತ್ತಿದ್ದರು. ಇದರಲ್ಲಿ ಪುರುಷ ಪಾತ್ರಗಳನ್ನೂ ಸ್ತ್ರೀಯರೇ ಧರಿಸುತ್ತಿದ್ದರು. ಇದು ಅಲ್ಪಾವಧಿಯಲ್ಲಿಯೇ ಮುಗ್ಗಿಹೋಯಿತು.

ಮೇಲೆ ನಿರ್ದೇಶ ಮಾಡಿದ ನಾಟಕ ಮಂಡಳಿಗಳಲ್ಲದೆ ಚಿಕ್ಕೋಡಿ ನಾಟಕ ಮಂಡಳಿ, ಕೊಪ್ಪಳ ನಾಟಕ ಮಂಡಳಿ ಮೊದಲಾದ ನಾಟಕ ಮಂಡಳಿಗಳೆಷ್ಟೋ ಈ ನಡುಗಾಲದಲ್ಲಿ ಹುಟ್ಟಿ ಸೌಭದ್ರ, ಗೋಪಿಚಂದ, ಶಾರದಾ ಮೊದಲಾದ ಮರಾಠಿ ನಾಟಕಗಳ ಭಾಷಾಂತರಗಳನ್ನೇ ಪ್ರಯೋಗ ಮಾಡುತ್ತ ಕೆಲಕಾಲ ಬಾಳಿ ನಾಮಶೇಷವಾದವು.

ಸುಮಾರು 12 ವರ್ಷಗಳ ಕೆಳಗೆ ತ್ರಿಪದತ್ತಾತ್ರೇಯ ಸಂಗೀತ ನಾಟಕ ಮಂಡಳಿಯು ಉದಯ ಹೊಂದಿತು. ಬೇರೆ ಬೇರೆ ಕನ್ನಡ ನಾಟಕ ಮಂಡಳಿಗಳಲ್ಲಿ ನಾಟ್ಯ ಕಲೆಯ ಶಿಕ್ಷಕರಾಗಿ ಕೆಲಸ ಮಾಡಿ ಅನುಭವ ಪಡೆದ ಗರುಡ ಸದಾಶಿವರಾಯರು ಇದರ ಸಂಸ್ಥಾಪಕರು. ಪಾದುಕಾಪಟ್ಟಾಭಿಷೇಕ, ಪಶ್ಚಾತ್ತಾಪ, ಕಬೀರದಾಸ, ಕಂಸವಧೆ, ಮೊದಲಾದ ಸ್ವತಂತ್ರ ನಾಟಕಗಳನ್ನು ಈ ಮಂಡಳಿಯವರು ಮೊದಲಿನಿಂದಲೂ ಪ್ರಯೋಗಿಸುತ್ತ ಬಂದಿದ್ದಾರೆ. ಪದ್ಮಾವತೀ, ಕೃಷ್ಣಲೀಲೆ ಮೊದಲಾದವುಗಳನ್ನೂ ಇವರು ಹೊತ್ತಿಗೆ ಉಪಯೋಗ ಬೀಳಲೆಂದು ತಮ್ಮ ಬತ್ತಳಿಕೆಯಲ್ಲಿ ಸುತ್ತಿಟ್ಟು ಕೊಂಡಿದ್ದಾರೆ. ಇತ್ತಿತ್ತಲಾಗಿ ಇವರು ಹೊಸದಾಗಿ ಬರೆದು ಕೂಡಿಸಿರುವ ಶರಣಬಸವ, ಚವತಿಯಚಂದ್ರ, ಸುದಾಮದೇವ ಮೊದಲಾದ ನಾಟಕಗಳು ಬಳ್ಳೇ ಲೋಕಪ್ರಿಯವಾಗಿವೆ. ಕನ್ನಡ ಕಡುಗಲಿ ಎಂಬ ಹೊಸ ಐತಿಹಾಸಿಕ ನಾಟಕವನ್ನು ಇವರು ಈಗೀಗ ಪ್ರಯೋಗಿಸಹತ್ತಿದ್ದಾರೆ, ಕನ್ನಡಿಗರ ಪೂರ್ವಜರ ಶೌರ್ಯ, ಧೈರ್ಯ, ಪರಾಕ್ರಮ, ಸತ್ಯನಿಷ್ಠೆ, ಔದಾರ್ಯ ಮೊದಲಾದ ಸದ್ಗುಣಗಳನ್ನು ಈಗಿನ ಜನಾಂಗದ ಮುಂದೆ ಮಂಡಿಸಿ ಅದರಲ್ಲಿ ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಭಾಷಾಭಿಮಾನಗಳ ಉದ್ರೇಕವನ್ನುಂಟು ಮಾಡುವದಕ್ಕೆ ಈ ನಾಟಕವು ಅನುಕೂಲವಾಗಿರುವದೆಂದು ಈ ಪ್ರಯೋಗವನ್ನು ನೋಡಿದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಮಂಡಳಿಯಲ್ಲಿ ಮುಖ್ಯ ನಟರಾಗಿರುವ ಸದಾಶಿವರಾಯರಿಗೆ 1925 ರಲ್ಲಿ ಬೆಳಗಾವಿಯಲ್ಲಿ ಕೂಡಿದ ಸಾಹಿತ್ಯ

ಸಮ್ಮೇಳನದಿಂದ "ಕರ್ನಾಟಕ ನಾಟಕಾಲಂಕಾರ" ಎಂಬ ಗೌರವದ ಪದವಿಯ
ದೊರೆತಿದೆ.

ಕರ್ನಾಟಕದ ವೀರವನಿತೆಯರಲ್ಲೊಬ್ಬಳಾಗಿ ಕೀರ್ತಿ ಪಡೆದಿರುವ ಕಿತ್ತೂ
ಸಂಸ್ಥಾನದ ಕೊನೆಯ ರಾಣಿಯಾದ ಚಿಕ್ಕಮ್ಮಾಜಿಯವರ ಚರಿತ್ರವನ್ನು ಅಬ್ಬಿಂಗೇರಿ
ನಾಟಕ ಮಂಡಳಿಯವರು ಈಗೀಗ ನಾಟಕರೂಪವಾಗಿ ಪ್ರದರ್ಶಿಸ ಹತ್ತಿರುವರೆಂ
ತಿಳಿಯುತ್ತದೆ. ಕನ್ನಡ ನಾಡಿನ ಇತಿಹಾಸವನ್ನು ಯಥಾವತ್ತಾಗಿ ಜನತೆಯ ಮುಂ
ಮಂಡಿಸುವ ನಾಟಕಗಳು ರಂಗಭೂಮಿಯ ಮೇಲೆ ಬರುವದು ಅಗತ್ಯವಾಗಿರುವದರಿಂ
ಇಂಥ ಪ್ರಯತ್ನಗಳು ಎಷ್ಟಾದರೂ ಕಡಿಮೆಯೇ ಸರಿ.

---

* ಧಾರವಾಡದಲ್ಲಿ 1929 ರಲ್ಲಿ ನೆರೆದ ಪ್ರಥಮ ಕರ್ನಾಟಕ ನಾಟಕ ಸಮ್ಮೇಳನದ ಸ್ವಾಗತಾಧ್
ಪೀಠದಿಂದ ಶ್ರೀಯುತರು ಮಾಡಿದ ಭಾಷಣದ ಮಹತ್ವದ ಭಾಗವನ್ನು ಇಲ್ಲಿ ಉದ್ಧರಿಸಲಾಗಿ
ಉತ್ತರ ಕರ್ನಾಟಕದ ನಾಟಕೀಯ ಉದ್ಯಮಗಳ ಸಮಗ್ರ ಸಮಾಲೋಚನೆಯ ಸುಂದರವಾ
ಶಬ್ದಚಿತ್ರವಿದಾಗಿರುವುದರಿಂದ ಸ್ವಲ್ಪ ವಿಸ್ತರದಿಂದಲಾದರೂ ಬರಲು ಯೋಗ್ಯವೆಂದೆನಿಸಿ
ಆಗ ವಿದ್ಯಮಾನರಾಗಿದ್ದು ಕನ್ನಡದ ಚಟುವಟಿಕೆಗಳಿಗೆ ಪ್ರೋತ್ಸಾಹಕರಾಗಿ ನಿಂತ ಹ
ವ್ಯಕ್ತಿಗಳು ಈಗ ಕಣ್ಮರೆಯಾಗಿವೆ. ಹೊಸ ವ್ಯಕ್ತಿಗಳೂ ನಾಟಕ ಸಂಘಗಳೂ ಅ
ಪರಂಪರೆಯನ್ನು ಮುಂಬರಿಸಿವೆ ; ಹೊಸ ಸಂಪ್ರದಾಯಗಳನ್ನು ಮೊದಲು ಮಾಡುತ್ತಲಿ

ಸಾಮಾನ್ಯ ಅನುಭವದಲ್ಲಿಯೂ ಅಸಾಮಾನ್ಯ ಅನುಭಾವದಲ್ಲಿಯೂ ಒಂದು ಸಾದೃಶ್ಯವಿದೆ.
ಜ್ಞಾನೇಂದ್ರಿಯಗಳಿಂದ ನಮಗಾಗುವ ಜಗತ್ತಿನ ಜ್ಞಾನವು ಗುಣಾವಳಿಗಳದಲ್ಲದೆ
ಮತ್ತೇನು? ಈ ಜ್ಞಾನವೂ matter ದ ಅಕ್ಷಮತ್ವವನ್ನೂ, ಅಗಮ್ಯತ್ವವನ್ನೂ,
ಅನಂತತ್ವವನ್ನೂ ಸಾರಿ ಅದಕ್ಕೂ ಬ್ರಹ್ಮಪಟ್ಟವನ್ನೇ ಕಟ್ಟುವದಿಲ್ಲವೆ? ಅನುಭಾವವಾದರೂ
ತನ್ನ ವಿಷಯದ ಬಗ್ಗೆ ಹೆಚ್ಚೇನು ಹೇಳಿದೆ? ಅನುಭವಕ್ಕೂ ಅನುಭಾವಕ್ಕೂ ಏನು ಹೆಚ್ಚು
ಕಡಿಮೆ? ಸಕ್ಕರೆಯ ಸಿಹಿಯನ್ನೂ ತಿಳಿದಷ್ಟಕ್ಕೆ ಎಲ್ಲ ಫಲಜಾತಿಗಳ ಸಿಹಿಯ ಅನುಭವವು
ಅವುಗಳ ಪ್ರತ್ಯಕ್ಷಾನುಭವವಿಲ್ಲದೆ ವರ್ಣನೆ ಮಾಡಲು ಸಾಕಾಗುವಷ್ಟಾದರೂ ಬರುವುದು
ಸಾಧ್ಯವೇ? ಕಣ್ಣಿನಿಂದ ಬರುವ ಅನುಭಾವವು ರವಿಯಿಂದ ಬರಬಹುದು? ಯಾವ ಅನು
ಭವವೂ ಜ್ಞಾನಿಯ ಪರಿಪಾಕ, ಹಾಗು ಜ್ಞಾನಸಾಧನಗಳ ಶಕ್ತಿ ಪಾವನವನ್ನೇ ಅವಲಂಬಿ
ಸಿದೆ. ನಮಗೂ ಗಿಡಗಳು ಕಾಣಿಸುವವೆಂದಷ್ಟಕ್ಕೆ ಜಗದೀಶಚಂದ್ರರಿಗೆ ಅವುಗಳ ವಿಷಯದ
ಜ್ಞಾನವಿರುವಷ್ಟು ನಮಗೇಕಿಲ್ಲಾ? ಅವರ ಅಭ್ಯಾಸಬಲ ಹಾಗು ಅವರ ಯಂತ್ರ ಸಾಮಗ್ರಿ
ನಮ್ಮಲ್ಲಿಲ್ಲ; ಇದೇಕಾರಣ. ಆದರೆ ಅನುಭವಕ್ಕೂ ಅನುಭಾವಕ್ಕೂ ಒಂದು ದೊಡ್ಡ
ಭೇದವಿದೆ. ಅನುಭವವು ಜಗತ್ತಿನ ಕಾರಣವನ್ನು ಹುಡುಕುತ್ತಿದೆ ; ಅನುಭಾವವು ಜಗತ್ತಿನ
ಕರ್ತೃವನ್ನೆ ಹುಡುಕುತ್ತಿದೆ.

ದ. ರಾ. ಬೇಂದ್ರೆ
(ವಿಚಾರ ಮಂಜರಿ)

Statement about ownership and other particulars about Newspaper

ANKANA

FORM IV

(See Rule 8)

1.	Place of Publication	Bangalore Karnataka State
2.	Periodicity of its Publication	Bi-Monthly
3.	Printer's Name Whether Citizen of India if Foreigner State the Country of Origin Address	B Guru Murthy Indian ILA Printers 153, 8th Cross, 4th Main Chamarajpet Bangalore-560 018
4.	Publisher's Name Whether Citizen of India if Foreigner State the Country of Origin Address	C Srinivasa Raju Indian 8, "Chiranjeevi" Old Swimming Pool Road Kodandarampura Bangalore-560 003
5.	Editors's Name Whether Citizen of India if Foreigner State the Country of Origin Address	A. R Nirupama Indian 372, 24th 'B' Cross Banashankari II Stage Bangalore-560 070
6.	Names and Address of Individuals who own the Newspapers and Partners or Shareholders holding more than one percent of the capital	C Srinivasa Raju 8, "Chiranjeevi" Old Swimming Pool Road Kodandarampura Bangalore-560 003

I, C Srinivasa Raju hereby declare that the particulars given above are true to the best of my knowledge and belief.

Bangalore
Dated : 1-3-1984

(Sd) **C. Srinivasa Raju**
Signature of Publishers

No. MAG (2) PQ3 DECL 322/1979-80
ANKANA (Kannada Bi-monthly) March-April 1984

Published by C. Srinivasaraju 8 'Chiranjeevi' Old Swimmingpool Road Kodandarampura, Bangalore-560 003, Printed at ILA Printers, 153, 4th Main, 8th Cross, Bangalore-560 018. Editor A. R. Nirupama.